

ಶ್ರೀ ಶ್ರೀ ವಿಷ್ಣುತೀರ್ಥ ವಿರಚಿತಾ

ಅಧ್ಯಾತ್ಮರಸರಂಜನೀ

ಕನ್ನಡ ಅನುವಾದ :

ಬ್ರಹ್ಮಾತ್ಮದಾಸ ಪಂ. ವಿದ್ಯಾಸಂಹಾಚಾರ್ಯ ಮಾಹುಲಿ



ಶ್ರೀ ವಿಷ್ಣುತೀರ್ಥರ ವೃಂದಾವನ, ಮಾದನೂರು (ಜಿ. ಕೊಪ್ಪಳ)

ಶ್ರೀ ವ್ಯಾಸತತ್ತ್ವಜ್ಞ ಪ್ರತಿಷ್ಠಾನ ಮಾದನೂರ

ಅವಧೂತ ಶಿರೋಮಣಿ

(ಅಡವಿ ಆಚಾರ್ಯ)

ಶ್ರೀ 108 ಶ್ರೀ ವಿಷ್ಣುತೀರ್ಥ ವಿರಚಿತಾ

ಅಧ್ಯಾತ್ಮರಸರಂಜನೀ

ಕನ್ನಡ ಅನುವಾದ :

ಬ್ರಹ್ಮಾತ್ಮದಾಸ ಪಂ. ವಿದ್ಯಾಸಿಂಹಾಚಾರ್ಯ ಮಾಹುಲಿ

ವ್ಯಾಸತತ್ವಜ್ಞ ಪ್ರತಿಷ್ಠಾನ

ಮಾದಿನೂರು

ಜಿಲ್ಲಾ : ಕೊಪ್ಪಳ

ADHYATMARASARANJANI

of Sri Vishnuteertha Swamiji

Published by :
Vyasatatvajna Pratishthana
Sri Vishnuteertha Swamy Math,
MADINOOR Dist : Koppal

First Edition : 14-2-1999
Second Edition : 14-2-2004
Third Edition : 17-2-2015

Saptagiri Printers, Bankapur Chowk, Hubli.

ಶುಭಾಶಂಸನ

ತಂದೆ ತಾಯಿಗಳಿಗಿಂತ ಮಿಗಿಲಾದ ಬಂಧುಗಳಿಲ್ಲ. ಅವರ ಉಪಕಾರಕ್ಕೆ ಎಣೆಯಿಲ್ಲ. ಅವರ ಪ್ರೀತಿಗೆ ಸೀಮೆಯಿಲ್ಲ. ತಂದೆ ತಾಯಿಗಳೇ ಕಂಗಳಿಗೆ ಕಾಣುವ ಭಗವಂತನ ಪ್ರತಿಮೆಗಳು. ಅವರು ಮಾಡಿದ ಉಪಕಾರವನ್ನು ತೀರಿಸಲು ಎಂದಿಗೂ ಸಾಧ್ಯವಿಲ್ಲ. ಅವರ ಉಪಕಾರ ಸ್ಮರಣೆಯೊಂದೇ ನಾವು ಮಾಡಬಹುದಾದ ಪುಣ್ಯದ ಕೆಲಸ.

ಈ ರೀತಿಯಾಗಿ ಉಪಕರಿಸಿದ ತಮ್ಮ ಮಾತಾಪಿತೃಗಳಾದ **ದಿ. ಶಾಂತಾಬಾಯಿ** ಹಾಗೂ **ದಿ. ನಾರಾಯಣರಾವ್ ಮುತಾಲಿಕದೇಸಾಯಿ** ಇವರುಗಳ ಸ್ಮರಣಾರ್ಥವಾಗಿ ಅವರ ಪುತ್ರಿಯಾದ **ಕು. ರೇಣುಕಾ ನಾರಾಯಣರಾವ್ ಮುತಾಲಿಕದೇಸಾಯಿ** ಇವರು ಈ ಗ್ರಂಥದ ಮುದ್ರಣ ವೆಚ್ಚವನ್ನು ಭಾಗಶಃ ವಹಿಸಿಕೊಂಡಿದ್ದಾರೆ.

ಈ ಪುಣ್ಯಕಾರ್ಯದಿಂದ ಪ್ರೀತನಾದ ಶ್ರೀ ವಿಷ್ಣುತೀರ್ಥರ ಅಂತರ್ಯಾಮಿಯಾದ ಪರಮಾತ್ಮನು ಅವರಿಗೆ ಹಾಗೂ ಪರಿವಾರದವರಿಗೆ ವಿಶೇಷವಾಗಿ ಜ್ಞಾನಭಕ್ತಿ ವೈರಾಗ್ಯಗಳನ್ನು ಆಯುರಾರೋಗ್ಯ ಐಶ್ವರ್ಯಗಳನ್ನು ನೀಡಿ ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ವ್ಯಾಸ ತತ್ತ್ವಜ್ಞ ಪ್ರತಿಷ್ಠಾನ

ಶ್ರೀಶಃ ಶರಣಂ

ಶ್ರೀ ಗುರುಭ್ಯೋ ನಮಃ

ಮುನ್ನುಡಿ

ಅವಧೂತ ಶಿರೋಮಣಿಗಳೆಂದು ಸರ್ವಮಾನ್ಯರಾದ ಶ್ರೀ ಶ್ರೀ ವಿಷ್ಣುತೀರ್ಥರು ಜ್ಞಾನವರೇಣ್ಯರು, ತಪೋನಿಧಿಗಳು, ಅಗಾಧವಿರಕ್ತರು. ಇವರು ಅನೇಕ ಗ್ರಂಥಗಳನ್ನು ಬರೆದರು. ಜಿಜ್ಞಾಸುಗಳಿಗೆ ಆ ಗ್ರಂಥಗಳು ಪರಮ ಉಪಕಾರಕವಾಗಿದೆ. ಮಧ್ವಸಿದ್ಧಾಂತದ ಮಹತ್ವದ ಪ್ರಮೇಯಗಳನ್ನು ಪ್ರಬಂಧ ರೂಪದಲ್ಲಿ ತಿಳಿಸುವದು ಇವರ ವೈಶಿಷ್ಟ್ಯ. ಪ್ರಮೇಯ ರುಚಿಗಳಿಗೆ ಇವರ ಗ್ರಂಥಗಳು ರಸದೌತಣ. ಉಪನಿಷದ್ಭಾಷ್ಯಾದಿಗಳ ಸಂಕ್ಷಿಪ್ತ ಸಂಗ್ರಹದಂತಿವೆ ಇವರ ಷೋಡಶೀ, ಚತುರ್ದಶಿಗಳು.

ಬಿಂಬಪೂಜೆ ಅತ್ಯಂತ ಅನಿವಾರ್ಯವೆಂದು ಹೆಚ್ಚು ಒತ್ತಿ ಒತ್ತಿ ತೋರಿಸಿಕೊಟ್ಟವರು ಈ ಮಹಾನುಭಾವರು. ಬಿಂಬಪೂಜೆಯ ಕ್ರಮವನ್ನು ವ್ಯಾಪಕವಾಗಿಯೂ ಬಿಡಿಬಿಡಿಯಾಗಿಯೂ ಅಧ್ಯಾತ್ಮರಸರಂಜನೀ ಗ್ರಂಥದಲ್ಲಿ ನಿರೂಪಿಸಿದ್ದಾರೆ. 1. ಶ್ರೀಹರಿಯ ಪರಮ ಸ್ವಾತಂತ್ರ್ಯ 2. ಬಿಂಬರೂಪಿ ಭಗವದ್ರೂಪವರ್ಣನೆ ಹಾಗೂ 3. ಸರ್ವಸಮರ್ಪಣೆ ಈ ಮೂರು ವಿಷಯಗಳು ಅಧ್ಯಾತ್ಮರಸರಂಜನಿಯಲ್ಲಿ ತುಂಬಿಕೊಂಡಿವೆ.

ಮಹಾವಿಷ್ಣುಭಕ್ತರೂ ಪರಮಜ್ಞಾನಿಗಳೂ ಆದ ಅಡವಿ ಆಚಾರ್ಯರು ಯಸ್ಮಿನ್ ಮಹಾಶ್ಲೋಕಮಬದ್ಧವತ್ಯಪಿ ಎಂಬ ತತ್ತ್ವವನ್ನು ಹೃದಯದಲ್ಲಿ ನೆರೆನಂಬಿದವರು. ಹಾಗಾಗಿ ಭಗವದ್ಗುಣಗಾನವನ್ನು ಮಾಡುವಲ್ಲಿ ಭಕ್ತಿರಸವನ್ನು ಹರಿಸುವಲ್ಲಿ ಅಧ್ಯಾತ್ಮರಸರಂಜನಿಯನ್ನು ಪರಮಪುಷ್ಟಗೊಳಿಸಿದ್ದಾರೆ.

ಶ್ರೀಮದಾಚಾರ್ಯರು ಸ್ಪಷ್ಟವಾಗಿ ಯಾವ ಗ್ರಂಥದಲ್ಲೂ ನಿರೂಪಿಸದಿರುವ ಭಗವದ್ರೂಪವನ್ನು ವರ್ಣಿಸಿದ್ದಾರೆ. ಅಂದ ಮಾತ್ರಕ್ಕೆ ಶ್ರೀಮದಾಚಾರ್ಯರಿಗೆ ಸರ್ವಥಾ ಅಸಮ್ಮತವೆಂದು ಹೇಳಲಾಗದು. ನೂರ್ನಾಲ್ಕು ಸ್ಥಲಗಳಲ್ಲಿ ಶ್ರೀಮದಾಚಾರ್ಯರು ಕೆಲವಂಶಗಳನ್ನು ಸ್ಪಷ್ಟವಾಗಿ ಹೇಳುತ್ತಾ ಉಳಿದ ವಿಶೇಷಗಳ ದಿಕ್ಪ್ರದರ್ಶನವನ್ನು ಸೂಚಿಸಿದ್ದಾರೆ ಎಂದು ತಿಳಿಯಬಹುದಾಗಿದೆ.

ಈ ಕಿರುಕೃತಿಯಲ್ಲಿಯ ಕೆಲವು ಮಹತ್ವದ ಮಾತುಗಳ ಅಭಿಪ್ರಾಯವನ್ನು ಶಾಸ್ತ್ರಗಳ ಆಲಂಬನದ ಮೇಲೆ ವಿಸ್ತಾರವಾಗಿ ವಿಮರ್ಶಿಸಿ ತಿಳಿದುಕೊಳ್ಳುವದು ಅಗತ್ಯವಿದೆ. ಮೇಲುಸ್ತರಿಯ ಅರ್ಥವನ್ನೇ ನಂಬಿದರೆ ಅಪಾಯವಾದೀತೆಂದು ನನ್ನ ಭಾವನೆ.

ಈವರೆಗೆ ಹೇಳಿದ ಅನೇಕ ಮಾತುಗಳ ಕುರಿತು (ವಿಮರ್ಶಾತ್ಮಕ) ವಿಶ್ಲೇಷಣಾತ್ಮಕ ಲೇಖ ಪ್ರಬಂಧ ಅಥವಾ ಸಾಧ್ಯವಾದರೆ ಗ್ರಂಥವನ್ನೇ ಬರೆಯುವ ಉತ್ಕಟ ಹಂಬಲವಿದೆ. ಜೊತೆಗೆ ಈ ಅಧ್ಯಾತ್ಮರಸರಂಜನಿಯ ಸಂಸ್ಕೃತ ವ್ಯಾಖ್ಯಾನವನ್ನು ಬರೆಯುವದು ಅವಶ್ಯಕವಿದೆ.

ಈ ಸೇವಾಕಾರ್ಯವನ್ನು ಗುರ್ವಂತರ್ಯಾಮಿ ವಿಷ್ಣುತೀರ್ಥಾಂತರ್ಯಾಮಿ ಜಯತೀರ್ಥಾದಿ ಸಮಸ್ತಗುರುದೇವತಾಂತರ್ಯಾಮಿ ಭಾರತೀರಮಣ-ಮುಖ್ಯಪ್ರಾಣಾಂತರ್ಯಾಮಿ ಅಂತರಾತ್ಮನು ನನ್ನಿಂದ ಮಾಡಿಸಿ ನನ್ನನ್ನು ಅನುಗ್ರಹಿಸಲೆಂದು ಅನನ್ಯ ಶರಣನಾಗಿ ಪ್ರಾರ್ಥಿಸುವೆನು.

ಈ ಅನುವಾದ ಮಾಡಲು ಸೂಚಿಸಿ, ಅದನ್ನು ಪ್ರಕಾಶಿಸಿದ ವ್ಯಾಸತತ್ತ್ವಜ್ಞ ಪ್ರತಿಷ್ಠಾನಕ್ಕೆ ನಾನು ತುಂಬ ಋಣಿ.

ಬ್ರಹ್ಮಾತ್ಮದಾಸ ಪಂ.

ವಿದ್ಯಾಸಿಂಹಾಚಾರ್ಯ

ಶ್ರೀಶಃ ಶರಣಂ

ಶ್ರೀ ಗುರುಭ್ಯೋ ನಮಃ

ಪ್ರಕಾಶಕರ ನುಡಿ

ಮಹಾಮಹಿಮರಾದ ಅವಧೂತ ಶಿರೋಮಣಿ ಶ್ರೀ ವಿಷ್ಣುತೀರ್ಥರ ಆರಾಧನಾ ಮಹೋತ್ಸವ ಕಾಲದಲ್ಲಿ ಜ್ಞಾನಸತ್ರದ ಆಯೋಜನೆ, ಪುಸ್ತಕ ಪ್ರಕಟಣೆ ಮೊದಲಾದ ಇನ್ನೂ ಅನೇಕ ಬ್ರಾಹ್ಮಣ ಸಮಾಜದ ಸೇವೆ ಉದ್ದೇಶದಿಂದ ಕುಲಪತಿ ಪಂ. ವಿದ್ಯಾಸಿಂಹಾಚಾರ್ಯ ಮಾಹುಲಿ ಇವರ ಪ್ರೇರಣೆ ಹಾಗೂ ಮಾರ್ಗದರ್ಶನದಲ್ಲಿ ಸ್ಥಾಪಿತವಾದ. ಶ್ರೀ ವ್ಯಾಸತತ್ತ್ವಜ್ಞ ಪ್ರತಿಷ್ಠಾನವು ಮೊದಲನೇಯದಾಗಿ ಈ ಚಿಕ್ಕ ಗ್ರಂಥ ಕುಸುಮವನ್ನು ಸಮರ್ಪಿಸುತ್ತಿದೆ. ಇದು ಅತ್ಯಂತ ಅವಸರದಲ್ಲಿ ಹೊರ ತಂದ ಕೃತಿಯಾಗಿದ್ದು, ಇನ್ನು ವಿಸ್ತೃತ ರೂಪದಲ್ಲಿ ಪ್ರಕಟಿಸಬೇಕೆಂಬ ಹಂಬಲವಿದೆ.

ಗ್ರಂಥ ಪ್ರಕಟಿಸುತ್ತೇವೆಂದು ಕೇಳಿದ ಕೂಡಲೇ ಪರಮಾನುಗ್ರಹಮಾಡಿ ಮಂತ್ರಾಕ್ಷತೆ ನೀಡಿ ಪ್ರೋತ್ಸಾಹಿಸಿದ ಪರಮಹಂಸಪರಿವ್ರಾಜಕಾಚಾರ್ಯವರ್ಯ ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀಮದುತ್ತರಾದಿಮಠಾಧೀಶರಾದ ಶ್ರೀ ಶ್ರೀ 1008ನೇ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಚರಣಕಮಲಗಳಲ್ಲಿ ಅನಂತಕೋಟಿ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಎಲ್ಲವನ್ನೂ ಉದಾರವಾಗಿ ನೀಡುವ ನಮ್ಮ ಗುರುಗಳಲ್ಲಿ ಉದಾರವಾಗಿ ನೀಡಲು ಇಲ್ಲದೇ ಇರುವದು ಒಂದೇ ಒಂದು ಪದಾರ್ಥ. ಅದು ಸಮಯ. ಅಂಥ ಅಮೂಲ್ಯ ಸಮಯವನ್ನು ನಮಗಾಗಿ ವಿನಿಯೋಗಿಸಿ ಅವಸರದ ಕೆಲಸಗಳ ನಡುವೆಯೂ ರಾತ್ರಿಯೆಲ್ಲ ಎಚ್ಚರಕುಳಿತು ಪುಸ್ತಕ ಬರೆದುಕೊಟ್ಟು ಎಲ್ಲ ತರಹದ ಅನುಗ್ರಹವನ್ನು ಮಾಡಿದ ಗುರುಗಳಾದ ಕುಲಪತಿ ಪಂ. ವಿದ್ಯಾಸಿಂಹಾಚಾರ್ಯರ ಪಾದಕಮಲಗಳಲ್ಲಿ ಅನಂತ ಪ್ರಣಾಮಗಳನ್ನು ಸಲ್ಲಿಸುತ್ತೇನೆ.

ಈ ಸಂಸ್ಥೆ ತೀರ್ಥರೂಪರಾದ ಶ್ರೀ ಆನಂದತೀರ್ಥಾಚಾರ್ಯ ಅಡವಿ ಅವರ ಕಲ್ಪನೆಯ ಕೂಸು. ಈ ದಿವಸ ನಿಮ್ಮೆದುರಿಗೆ ನನಸಾಗಿ ಪ್ರಥಮ ಹೆಜ್ಜೆ ಇಟ್ಟು ಪುಸ್ತಕವನ್ನು ಪ್ರಕಟಿಸುತ್ತಿದೆ. ನನ್ನನ್ನು ನಿಮಿತ್ತನನ್ನಾಗಿ ಮಾಡಿ ಅನೇಕ ದಿನಗಳ ಶ್ರಮದಿಂದ ಈ ಸಂಸ್ಥೆಯನ್ನು ಸ್ಥಾಪಿಸಿ ಮುನ್ನಡೆಸುತ್ತಿರುವ ಅವರಿಗೆ ಸಾಷ್ಟಾಂಗಪೂರ್ವಕ ನಮಸ್ಕರಿಸುತ್ತೇನೆ.

ಇದೇ ರೀತಿ ಅತೀವ ವಿಶ್ವಾಸದಿಂದ ಈ ಗ್ರಂಥವನ್ನು ಶೀಘ್ರವಾಗಿ ಮುದ್ರಿಸಿಕೊಟ್ಟಿರುವ ಸಪ್ತಗಿರಿ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಸತೀಶ ಪಾಟೀಲ ಅವರನ್ನು ಮತ್ತು ಪುಸ್ತಕ ಪ್ರಕಟಣೆಗೆ ಸಹಾಯ ಸಲ್ಲಿಸಿದ ಎಲ್ಲ ಭಕ್ತವರ್ಗವನ್ನು ಹಾಗೂ ತಮ್ಮ ಯುನಿವರ್ಸಿಟಿಯ ಎಲ್ಲ ಕೆಲಸಗಳ ಮಧ್ಯದಲ್ಲಿಯೂ ಸಂಸ್ಥೆಗಾಗಿ ದುಡಿಯುವ ಈ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಶ್ರೀ ಅಶೋಕರಾವ್ ಚಟಡಿ ಇವರೆಲ್ಲರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಶ್ರೀಕರಾಚಾರ್ಯ ಅಡವಿ

ಅಧ್ಯಕ್ಷರು

ವ್ಯಾಸತತ್ತ್ವಜ್ಞ ಪ್ರತಿಷ್ಠಾನ

18-2-2015

ಶ್ರೀಮದ್ವಿಷ್ಣು ತೀರ್ಥವೃಂದಾವನ ಸ್ತೋತ್ರಂ

ಮಂದಾ ಮೋದಪುರೀ ಯದಾಶ್ರಯಬಲಾತ್ ವೃಂದಾರಕಾಣಾಂ ಪುರೀ
ಮಂದಾರಾದಿಯುತಾ ಸ್ವಸೌಖ್ಯವಿಷಯೇ ಸಂದೇಹಹೀನಾ ಬಭೌ ।
ಇಂದ್ರಾದ್ಯಾಶ್ಚ ವಸಂತಿ ಯತ್ರ ಪುರತಃ ಸಾಂದ್ರಾ ಸುಗುಪ್ತಾ ಕ್ಷಿತೌ
ವಂದೇ ತಂ ವರವಿಷ್ಣುತೀರ್ಥಸುಗುರೋರ್ವೃಂದಾವನಂ ಸ್ವದ್ರುಮಂ ॥1॥

ಅಹೋ ಧನ್ಯಾ ಮಾನ್ಯಾ ಗುರುಚರಣಸಂದರ್ಶನಪರಾ
ವಿನಾ ಭಾಗ್ಯಂ ಯೋಗ್ಯಂ ನ ಭವತಿ ನರಾಣಾಮಿದಮಲಂ ।
ಅನೌಪಮ್ಯಂ ರಮ್ಯಂ ಪರಮಗುರುವೃಂದಾವನಮಿದಂ
ಪರಂ ಮಾನ್ಯಂ ಮನ್ಯೇ ಸುರವಿನುತಕೈಲಾಸಶಿಖರಂ ॥2॥

ಸಂಸಾಧಿತಂ ಸರ್ಪವರೇಣ ವೇಷ್ಟಿತಂ
ಕಂಸಾರಿಯುಕ್ತಂ ಕಮಠಾಸನೇ ಸ್ಥಿತಂ ।
ಸಂಸೇವಕಾನಾಮಭಯಪ್ರದಂ ಗುರೋಃ
ವೃಂದಾವನಂ ಭಾತಿ ಯಥೈವ ಮಂದರಃ ॥3॥

ಆನಂದಕಾನನಸಮಾಖ್ಯಮಿದಂ ಸ್ಥಲಂ ವೈ
ಗಂಗಾನದೀವದವಭಾತಿ ನದೀ ತ್ವಿಯಂ ಮೇ ।
ವಿಶ್ವೇಶ್ವರಾಕೃತಿರಿವಾತ್ರ ಪದಂ ಗುರೂಣಾಂ
ವೃಂದಾವನಂ ಭುವನಪಾವನಪಾವನಾನಾಂ ॥4॥

ಅನಂತಾ ಹಿ ವೇದಾಃ ಸ್ವನಂತಿ ಸ್ಮ ಯಂ ಸ
ತ್ವನಂತೋಽಸ್ತಿ ಯಸ್ಮಿನ್ನನಂತೇನ ಯುಕ್ತಃ ।
ಅನಂತಾದ್ರಿಸಾಮ್ಯಾದನಂತಂ ಗುರೂಣಾಂ
ವನಾಂತಸ್ಥ ವೃಂದಾವನಂ ತದ್ಭಜೇಽಹಂ ॥5॥

ಪಂಚಶ್ಲೋಕಾನಿಮಾನ್ನಿತ್ಯಂ ಪಂಚವಾರಂ ಪಠೇನ್ನರಃ ।
ಪಂಚಪಾತಕನಾಗಾನಾಂ ಪಂಚಾಸ್ಯೋ ಭವತಿ ಧ್ರುವಂ ॥6॥

ಅಧನೋ ಧನಮಾಪ್ನೋತಿ ಅಪುತ್ರಶ್ಚ ಸುಪುತ್ರವಾನ್ ।
ಮನೋಽಭೀಷ್ಟಮವಾಪ್ನೋತಿ ಮನಃಪ್ರೇರಿತಸಂಖ್ಯಯಾ ॥7॥

॥ ಇತಿಶ್ರೀಮದ್ವಿಷ್ಣುತೀರ್ಥ ವೃಂದಾವನ ಸ್ತೋತ್ರಂ ॥

ಶ್ರೀಶಃ ಶರಣಂ

|| ಶ್ರೀ ಗುರುಭ್ಯೋ ನಮಃ ||

|| ಅಧ್ಯಾತ್ಮ ರಸರಂಜನೀ ||

ಪಾಹಿ ಪಾಂಡವಪಾಲಕಾಮಿತಪಾಪಿನಂ ಭವತಾಪತೋ
ಏಹಿ ಮಾನಸಮಂದಿರಾಂಗಣದೇಶಮೀಶ ನಮೋಸ್ತು ತೇ
ಪುತ್ರಮಿತ್ರಕಲತ್ರಪೂರ್ವಕಮತ್ರಗಂ ನ ಪರತ್ರಗಂ
ಯತ್ರಯತ್ರ ಗತಿರ್ಮಮೇಶ್ವರ ತತ್ರ ತೇಸ್ತು ಪದಾಂಬುಜಮ್ ||1||

ಓ ಜಗದೊಡೆಯ! ಓ! ಜೀವನಾಥ! ನೀನು ಪಾಂಡವರ ಪಾಲಕ.

ನಿನ್ನ ಮೆಚ್ಚಿನ ಪಾಂಡವನಿಗೆ ಕೊಟ್ಟ ವಚನ ನೆನಪಿರಲು ಸಾಕು. "ಮಾಮೇಕಂ ಶರಣಂ ವ್ರಜ । ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ" || ಇದು ನಿನ್ನ ಪ್ರತಿಜ್ಞೆ.

ನಾನು ಅಮಿತ ಪಾಪವನ್ನು ಮಾಡಿರುವೆ. ಅಂತೆಯೇ ಸಂಸಾರದಲ್ಲಿ ಬಳಲಿ ಬೆಂಡಾಗಿರುವೆ.

ಎಷ್ಟೇ ಪಾಪವನ್ನು ಮಾಡಿದರೂ ನಿನಗೆ ಶರಣು ಸೇರಿದ ನನ್ನನ್ನುದ್ಧರಿಸುವದು ನಿನ್ನ ಹೊಣೆ; ಅದು ನಿನ್ನ ಪ್ರತಿಜ್ಞೆಯೂ ಹೌದು.

ಸಂಸಾರದಿಂದಲೂ ಸಂಸಾರದಲ್ಲಿಯ ತಾಪಗಳಿಂದಲೂ ನನ್ನನ್ನು ಕಾಪಾಡು. ಓ ಹೃದಯನಾಥ! ಎನ್ನ ಅಂತರಾತ್ಮಾ, ನೀನು ನನ್ನ ಮನದಲ್ಲಿ ಮೂಡಿ ಬಾ.

ಮನಸ್ಸು ಇದು ನಿನ್ನ ಮನೆ, ಮಂದಿರ. ದೇವಮಂದಿರದಲ್ಲಿ ಎಂದಿಗೂ ಗಲೀಜು ಮಾಡಬಾರದು. ಹಾಗೆ ನನಗೆ ಎಂದೆಂದಿಗೂ ನಿನ್ನ ಮಂದಿರವಾದ ಮನದಲ್ಲಿ ಕುಕರ್ಮ ಮಾಡುವ ಇಚ್ಛೆ ಇಲ್ಲ.

ಆ ಮಾನಸಮಂದಿರದಲ್ಲಿ ನನ್ನ (ಅಂಗಣ) ಅಂಗಗಳನ್ನು ಪ್ರಣಯನ, ಉನ್ನಯನ ಮಾಡುವ, ಕ್ರಿಯಾಶೀಲಗೊಳಿಸುವ ಮುಖ್ಯಪ್ರಾಣರಿದ್ದಾರೆ. ಅವರ ಸನಿಹದಲ್ಲಿ ನೀನು ನೆಲೆಸು.

ನನ್ನ ಮನಸ್ಸು ಜ್ಞಾನಸಾಧನ. ಆ ಮನೋಮಂದಿರದಲ್ಲಿ ನೀನು ನೆಲೆಯಾದರೆ ನಿನ್ನನ್ನು ತಿಳಿಯುವುದು ತುಸು ಸುಲಭ. ನಿನ್ನ ತಿಳಿವು ಕೊಡು ಸ್ವಾಮಿ! ನಾನು ನಿನಗೆ ನಮಿಸುವೆ, ಬಾಗುವೆ, ಬಾಗಿ ಬೇಡುವೆ.

ನನ್ನ ಮಡದಿ ಮಕ್ಕಳು ಸ್ನೇಹಿತರು ಎಲ್ಲರೂ ಇಲ್ಲಿ ಮಾತ್ರ ಇರುವವರು. ಪರತ್ರದಲ್ಲಿ ಇವರಾರೂ ಇಲ್ಲ.

ಅಲ್ಲದೆ ಬುದ್ಧಿಯಂತೆಂಬ ಕನ್ನಿಕೆಯ ಮದುವೆಯ ಆಗಿ ಎಂಬಂತೆ ಬುದ್ಧಿ ನನ್ನ ಮಡದಿ, ಬುದ್ಧಿಯಿಂದ ನಾನು ಮಾಡುವ ವಿಚಾರಗಳು, ಮನದ ಬಯಕೆಗಳು, ನಾನಾವೃತ್ತಿಗಳು ನನ್ನ ಪುತ್ರ ಸಂತಾನ.

ಇಂದ್ರಿಯಗಳೆಲ್ಲ ನನ್ನ ಜೊತೆಗಿರುವ ಸ್ನೇಹಿತರು. ಇವರೆಲ್ಲ ಸಂಸಾರದಲ್ಲಿ ಮಾತ್ರ ನನ್ನ ಜೊತೆ.

ಮುಂದೆ ನನಗೂ ಅವರಿಗೂ ಯಾವ ನಂಟುತನವೂ ಇಲ್ಲ. ಕೆಲವು ದಿನಗಳು ಬಳಿಕ ಘಟಸ್ಫೋಟವಾಗುವದೂ ನಿಜ.

ಅಂದಮೇಲೆ ಓ ಅಂತರಾತ್ಮಾ! ನೀನೊಬ್ಬನೇ ನನಗೆ. ನಿನ್ನದೊಂದೇ ನನಗೆ ಅನಾದಿ ಕಾಲದ ಋಣಾನುಬಂಧ. ಅಂತೆಯೇ ಮನ ನಿನ್ನಲ್ಲಿಯೇ ನಿಲ್ಲಿಸು ಮಾಧವ.

ನನ್ನ ಮನ ತುಂಬ ಚಂಚಲ, ಸ್ಥಿರವಲ್ಲ. ನಿನ್ನನ್ನು ನೆನೆಯಲು ವಲ್ಲದು. ನಿನ್ನ ಸನಿಹವೂ ಬರಲೊಲ್ಲದು. ಅದಕ್ಕೊಂದು ಉಪಾಯ ನಾನು ಕಂಡಿರುವೆ.

ನನ್ನ ಮನಸ್ಸು ಏನನ್ನು ನೆನೆಯುವದೊ, ಬಯಸುವದೊ ಅಲ್ಲಿ ನೀನು ನಿನ್ನ ಸನಿಧಾನ ತೋರು. ಹಾಗಾಗಿ ನಿನ್ನನ್ನೇ ನೆನೆದಂತೆ, ನಿನ್ನನ್ನೇ ಬಯಸಿದಂತೆಯೂ ಆಗುವದು.

ಇದು ನಿನಗೆ ಅನಿವಾರ್ಯವೂ ಹೌದು. ಮನಸ್ಸು ಮನಗಂಡಲ್ಲಿ ಹೋಗುವುದಿಲ್ಲ. ಅದು ಸ್ವತಂತ್ರವಲ್ಲ. ನೀನು ಸ್ವತಂತ್ರ. ನೀನು ನೂಕಿದಲ್ಲಿ ಬೀಳುವದು, ನೀನು ಎಳೆದಲ್ಲಿ ಬಳಿಬರುವದು. ಒಟ್ಟಂದದಲಿ ಮನ ನಿನ್ನನ್ನು ಕಾಣುವುದಿಲ್ಲ. ನೀನೇ ಮನಸ್ಸಿಗೆ ಕಾಣು.

ನೋ ಭಯಂ ನ ಚ ದುರ್ಗತಿರ್ನ ಚ ಪಾತಕಂ ಕಲಿಕಾಲಜಂ
ತ್ವಯ್ಯನಾಥಗತೌ ಸದೈವ ಹಿ ಮಾನಸಾಂತಿಕಸಂಸ್ಥಿತೇ
ನಿತ್ಯಮೇವ ವಿನೋದಮಾತ್ರಮಪೇಕ್ಷಿತಂ ಸಹ ಮೇ ತ್ವಯಾ
ನೈವ ಕಿಂಚಿದಪೇಕ್ಷಿತಂ ಪ್ರಿಯ ಸತ್ಯಮೇತದುದೀರಯೇ ||2||

ಕೆಂಡ ಹರಡಿದ ಮನೆಯಲ್ಲಿ ಹತ್ತಿಯು ಹಾರಾಡಬಹುದೇ?
ಹಾಗೆ ನೀನು ಮೂಡಿದ ಮನದಲ್ಲಿ ಪಾತಕವಿರಲು ಸಾಧ್ಯವೇ?

ನೀನು ಪಾಪಗಳಿಗೆ ಕೆಂಡದಂತಲ್ಲವೇ?

ಆದುದರಿಂದ ಪಾಪವು ನನ್ನಲ್ಲಿ ಇಲ್ಲ. ದುರ್ಗತಿಯೂ ಇಲ್ಲ. ನನಗೆ ಯಾವ ಭಯವೂ ಇಲ್ಲ.

ಪಾಪ ಬರುವದು ದುಷ್ಕರ್ಮಗಳಿಂದ. ದುಷ್ಕರ್ಮವಾಗುವದು ಕಲಿಕಾಲದಿಂದ. ಕಲಿಕಾಲವಿದ್ದ ಮಾತ್ರಕ್ಕೇನು? ಶ್ರೀಮದಾಚಾರ್ಯರು ಕಲಿಕಾಲದಲ್ಲೇ ಹುಟ್ಟಿದರಲ್ಲವೇ? ಪಾಪ ಮಾಡಿದರೇ? ಕೃತತ್ರೇತಗಳಲ್ಲಿ ಜನಿಸಿದ ದಾನವರು ಪಾಪ ಮಾಡಲಿಲ್ಲವೇ? ಆಗ ಕಲಿಕಾಲವಿತ್ತೇ?

ನಿಜ. ಒಂದರ್ಥದಲ್ಲಿ ಕಲಿಕಾಲ ಬಹಳ ಮಹತ್ವದ್ದಲ್ಲ. ಕಲಿಯ ಆಕಲನ, ಕಲಿಯ ಉಪದೇಶವನ್ನು ಸ್ವೀಕರಿಸಬೇಕೆಂಬ ದುಷ್ಪ್ರಜ್ಞೆ ಇದು ಕಲಿಕಾಲ. ಎಂದಿಗಾದರೂ ಯಾರಿಗಿದ್ದರೂ ಇದುವೇ ಮೂಲಪಾಪ. ಕಲಿಯ ಪ್ರೇರಣೆಗೆ ಒಳಪಡದ ಪರಶುಕ್ಲರಿಗೆ ಪಾಪವಿಲ್ಲ.

ಕಲಿಯ ಪ್ರೇರಣೆ ಆಗಬಾರದಿದ್ದರೆ ಅದಕ್ಕೆ ಪ್ರಾಣದೇವ ಹಾಗೂ ಪ್ರಾಣಪತಿ ದೇವರ ಬೆಂಬಲ ಬೇಕು.

ಅವರ ಬೆಂಬಲವಿಲ್ಲದವರಿಗೆ ಕಲಿ ತಲೆ ಕೆಡಿಸುವನು. ಗತಿಯಿಲ್ಲದವರಿಗೆ ಕಲಿಯೇ ಗತಿಯಾಗುವನು. ನಿನ್ನನ್ನು ಪತಿಯಾಗಿ ಪಡೆದ ನಾನು ನಿರ್ಗತಿಕನಲ್ಲ.

ನಿನ್ನ ಬೆಂಬಲ, ನಿನ್ನ ಉಪದೇಶದ ಬೆಂಬಲ ಸದಾ ಕಾಲ ಇರಲಿ. ನೀನು ದೂರವಿದ್ದರೆ ನಿನ್ನ ಉಪದೇಶ ನನಗೆ ಕೇಳಿಸಲಾರದು.

ಕಾರಣ ನೀನೇ ಎನ್ನಹತ್ತಿರ ಬಾ. ಬಂದು ಉಪದೇಶಿಸು. ನಾನು ಕೇಳಿದರೂ ನನ್ನ ಮನ ಕೇಳುವುದಿಲ್ಲ. ಆದ್ದರಿಂದ ನನ್ನ ಮನಸ್ಸಿಗೇ ನೀನು ಉಪದೇಶಿಸು. ಅದನ್ನೇ ನೀನು ತಿದ್ದಿ ತೀಡಿ ಹೊಸ ತಿರುವು ಕೊಡು.

ಓ ದೇವ! ನನಗೆ ನಿನ್ನ ಒಡನಾಟ ಬೇಕು, ನಿನ್ನೊಡನೆ ಆಟ ಬೇಕು. ಎಂಥೆಂಥವರ ಒಡನಾಟದಲ್ಲಿದ್ದು, ಅವರ ಹುಸಿನಗೆಗೆ ನಕ್ಕು ಮೋಜು ಮಾಡಿ ಕಾಲ ಕಳೆದೆ, ಬಾಳು ಹಾಳು ಮಾಡಿದೆ. ಸಾಕಾಯಿತು.

ಅವರದೆಲ್ಲ ಮೋಸ ಎನ್ನುವುದು ಈಗ ಕಂಡಿತು. ಇನ್ನು ಮೇಲೆ ನನ್ನ ಮನದ ಅಂಗಣದಲ್ಲೇ ಸುಳಿಯುವ ನಿನ್ನೊಡನೆ ಆಡವಾಡಬೇಕು. ಈ ವರ ನೀಡಬಹುದೇ ಓ ಸ್ವಾಮಿ! ಓ ಪ್ರಿಯ! ನನ್ನ ಮೆಚ್ಚಿನ ನಾಥ ನನಗೆ ಬೇರೆ ಏನೂ ಬೇಡ.

ಸತ್ಯವಾಗಿ ಹೇಳುವೆ. ನೀನು ಬೇಕು, ನಿನ್ನ ಸ್ನೇಹ ಬೇಕು.

ಪ್ರೀತಿರಸ್ತಿ ತವಾಪಿ ಸಂಸ್ತುತಿಮಾತ್ರ ಏವ ವಿನೋದತೋ-
ಪ್ಯಾವಯೋಃ ಸಮಶೀಲಯೋರಿಹ ಮಂದಿರೇ ನ ವಿಯೋಗತಾ
ದೇವ ತೇ ಪದಪಂಕಜೇ ಮಮ ಚಿತ್ತಮೇವ ನ ಚೇತ್ತದಾ
ಕುತ್ರ ಗಚ್ಛತಿ ತದ್ವದಸ್ವ, ರಮೇಶಮೇಧ್ಯ ಸತಾಂ ಗಣೇ ||3||

ನಿನ್ನನ್ನು ಕೊಂಡಾಡುವದೇ ನನಗೆ ತುಂಬ ಪ್ರಿಯ. ನಿನಗೂ ನಿನ್ನನ್ನು ಕೊಂಡಾಡುವದೇ ಪ್ರಿಯ.

ನಿನ್ನ ಸ್ತವನ ಎನಗೆ ಪ್ರಿಯವಾಗಿರುವದು ನನ್ನ ಸಾಧನೆ. ನಿನಗೆ ನಿನ್ನ ಸ್ತುತಿ ಪ್ರಿಯವಾಗಿರುವದು ಬರಿಯ ವಿನೋದ.

ನೀನು ಸ್ತುತಿಪ್ರಿಯ, ಹೊಗಳಿಕೆಯಿಂದ ಮೆಚ್ಚುವೆ. ಆದರೆ ಎಂದೂ ಉಬ್ಬುವವನಲ್ಲ. ಉಬ್ಬಲು ಸಾಧ್ಯವೂ ಇಲ್ಲ. ಅಷ್ಟು ಅನಂತ, ಪರಿಪೂರ್ಣ.

ಅಂತೆಯೇ ನಿನ್ನನ್ನು ಉಬ್ಬಿಸುವಂತೆ ಸ್ತುತಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಸ್ತುತಿ ನಿನಗೆ ಪ್ರಿಯವಾಗಿರುವುದು ಕೇವಲ ವಿನೋದ ಮಾತ್ರ.

ನನಗೂ ನಿನಗೂ ವಿಯೋಗವಿಲ್ಲ. ನಾನು ಅನಾಥ, ನಿನ್ನನ್ನು ಬಿಟ್ಟಿರಲಾರೆ. ನೀ ಎನ್ನ ನಾಥ, ನನ್ನ ನೀ ಬಿಟ್ಟಿರಲಾರಿ.

ಬಿಟ್ಟಿರುವದಕ್ಕೆ ನನಗೆ ಬಲವಿಲ್ಲ. ನಿನಗೆ ಮನವಿಲ್ಲ.

ನಾವಿಬ್ಬರೂ ಚೇತನರು. ಅರಿವು, ಬಯಕೆ, ಕ್ರಿಯಾಶೀಲತೆ - ಇವೆಲ್ಲ ನಮ್ಮಿಬ್ಬರಿಗೂ ಸಮಾನ. ನೀನು ನನ್ನನ್ನು ಪ್ರೀತಿಸುತ್ತೀ, ಈ ಪ್ರೇಮವೇ ಕೃಪೆ. ನಾನು ನಿನ್ನನ್ನು ಪ್ರೀತಿಸುತ್ತೇನೆ, ಇದುವೇ ಭಕ್ತಿ.

ಅಲ್ಲದೇ ನೀನೂ ನಿನ್ನನ್ನು, ನಾನು ನನ್ನನ್ನು ಪ್ರೀತಿಸುತ್ತೇವೆ. ಇದು ಸ್ವಾತ್ಮಸ್ನೇಹ. ತಮ್ಮ ತಮ್ಮನ್ನು ಹಾಗೂ ಒಬ್ಬರು ಮತ್ತೊಬ್ಬರನ್ನು ಪ್ರೀತಿಸುವದು ನಮ್ಮಿಬ್ಬರ ಚಟ.

ಈ ಚಟ, ಶೀಲಗಳು ನಮ್ಮಿಬ್ಬರಲ್ಲಿ ಸಮಾನವಾದುದರಿಂದ ನಾನಿನ್ನ ಬಿಡಲಾರೆ, ನೀ ನನ್ನ ಬಿಡಲಾರಿ, ಓ ದೇವ! ನಿನ್ನ ಅಡಿ ತಾವರೆಗಳಲ್ಲಿ ಆಡದೇ, ನನ್ನ ಮನದುಂಬಿ ಎಲ್ಲಿ ನಲಿಯಬಹುದು.

ಯದ್ಯದೋ ವಿಷಯೇಷು ಗಚ್ಛತಿ ತರ್ಹಿ ತೇ ವಚನಂ ಕಥಂ
ಶೋಭತೇ ವಿಷಯೇಷು ಸಂತತ ಭಾವನಾದ್ಯಭಿಧಾಯಕಮ್
ಯಜ್ಜಡಂ ಜಡತುಲ್ಯಮನದತಸ್ತ್ವಮೇವ ಹಿ ವಸ್ತು ನಃ
ಸೌಖ್ಯದಸ್ತ್ವಮಥಾಭಿಮುಖ್ಯಕರಸ್ತ್ವಮೇವ ನ ಚೇದ್ಭವೇತ್ ||4||

ದೇವರು ನುಡಿದ - ನಿನ್ನ ಮನಸ್ಸು ವಿಷಯದಲ್ಲಿ ತೊಡಗಿ ಸಂತಸಗೊಳ್ಳಲಿ. ನಾನೇ ನಿನ್ನ ಮನಸ್ಸಿಗೆ ಯಾಕೆ ಬೇಕು?

ಭಕ್ತ ನುಡಿದ ಓದೇವ! ಸಂಸಾರದ ವಿಷಯಗಳೆಲ್ಲ ಜಡ, ಪರತಂತ್ರ. ಆದುದರಿಂದ ಅವುಗಳಲ್ಲಿ ನನ್ನನ್ನೇ ಸ್ಮರಿಸು ಎಂದು ನೀನು ಹೇಳುವ ಮಾತು ಹುಸಿಹೋದೀತು.

ಅಂದರೆ, ಆ ಸಾಂಸಾರಿಕ ವಿಷಯಗಳೆಲ್ಲ ನಿನ್ನಧೀನ. ಆದುದರಿಂದ ನಿನ್ನಿಂದಾಗಿ ಅವು ನಮ್ಮನ್ನು ಆಕರ್ಷಿಸಬಹುದು. ನೀನಿಲ್ಲದಿದ್ದರೆ ಅವು ನಮ್ಮನ್ನು ಆಕರ್ಷಿಸುವಂತಿಲ್ಲ. ನಮಗೆ ಆಹ್ಲಾದಿಸುವಂತೂ ಇಲ್ಲ.

ಯಾವುದೇ ವಿಷಯದಿಂದ ನಮಗೆ ಸುಖವಾಗುವದು, ತೃಪ್ತಿಯಾಗುವದು ಅಲ್ಲಿರುವ ನಿನ್ನ ಇಚ್ಛೆಯಿಂದ.

ಆದುದರಿಂದ ನಮ್ಮ ಇಂದ್ರಿಯ, ಮನಸ್ಸುಗಳನ್ನು ಸೆಳೆಯುವ ಸಾಮರ್ಥ್ಯ ಹಾಗೂ ಸಂತಸಪಡಿಸುವ ಸಾಮರ್ಥ್ಯ ಸ್ವತಂತ್ರವಾಗಿ ನಿನ್ನದು. ವಿಷಯಗಳಿಗೆಲ್ಲಿ?

ಚಿತ್ತನಾಮಕ ಯತ್ರ ಯಾಸ್ಯಸಿ ತತ್ರ ಗಚ್ಛತಿ ಮೇ ಮನೋ
ದುಷ್ಟತಾ ನನು ಕಂಚುಕಸ್ಯ ನ ಶೋಭತೇ ವಸುಧಾತಲೇ
ಏವಮೇವ ಹಿ ಚಕ್ಷುರಾದ್ಯಖಿಲೇಂದ್ರಿಯಸ್ಯ ಗತಿರ್ಭವೇತ್
ಕಾಯವೃತ್ತಿರಪೀತ್ಥಮೇವ ವಿನಿಶ್ಚಿತಾ ಬುಧಸಂಸದಿ ||5||

ದೇವರು ನುಡಿದ - ನಾನು ನಿನ್ನ ಮನಸ್ಸಿಗೆ ಗೋಚರನಾಗಿ ಸುಖಪಡಿಸಬಹುದು. ಆದರೆ ನಿನ್ನ ಮನಸ್ಸು ತುಂಬ ಶಠ, ದುಷ್ಟ. ಕಂಡಕಂಡಲ್ಲಿ ಎರಗಿ ಹಾಳಾಗಿ ಹೋಗಿದೆ.

ಭಕ್ತ ದೇವರಿಗೆ ಉತ್ತರಿಸುತ್ತಾನೆ - ಓ ದೊರೆ! ನನ್ನ ಮನಸ್ಸು ಕಂಡ ಕಂಡಲ್ಲಿ ಎರಗಲು ಅದು ಸ್ವತಂತ್ರವೇ? ನಿನ್ನಧೀನವಲ್ಲವೇ?

ಚಿತ್ತನಾಮಕನಾದ ನೀನು ಎತ್ತ ಹೋಗುವಿ ಅತ್ತ ಅದು ಧಾವಿಸುವದು. ಮೈಹೋದಲ್ಲಿ ಮೈಗೆ ಹಾಕಿದ ಅಂಗಿ ಹೋಗುವುದು ಸಹಜ! ಮೈ ಹೋಗದೆ ಮೈಗೆ ತೊಡಗಿದ ಅಂಗಿ ಸ್ವಂತವಾಗಿ ಎಲ್ಲಾದರೂ ಹೋಗಬಲ್ಲದೇ?

ಹಾಗೆ ಚಿತ್ತಕ್ಕೆ ಚಿತ್ತನೆನಿಸಿದ ನೀನು ಎಲ್ಲಿ ಎಷ್ಟು ಬೇಗ ಧಾವಿಸುವಿಯೋ ಅಲ್ಲಿ ಅಷ್ಟೇ ವೇಗದಿಂದ ಚಿತ್ತವು ಹಿಂಬಾಲಿಸುತ್ತದೆ.

ಓ ಸ್ವಾಮಿ! ಇದರಲ್ಲಿ ನನ್ನ ತಪ್ಪೇನು? ಇದೇ ತೆರನಾಗಿ ಎಲ್ಲ ಇಂದ್ರಿಯಗಳ ಕಥೆ. ದೇಹದ ಹಾಡೂ ಇದೇ.

ಇದೆಲ್ಲ ಮಾತು ಬಲ್ಲವರು ಬಲ್ಲರು.

ಕರ್ಮಕಾನ್ಯಪಿ ಹಸ್ತಪಾದತದಂಗುಲೀಮುಖದೇಹಜಾ-
ನ್ಯತ್ರ ಸಂತತವಾಕ್ಸಮುದ್ಭವವರ್ಣಪೂರ್ವಕಶಬ್ದಕಾಃ
ಸರ್ವದೈವ ಹಿ ತಾವಕಾಮಿತಮೂರ್ತಿಕಾರಣಭಾವತೋ
ದೋಷಕಾರಣಭಾವಮೇವ ಹಿ ನೈವ ಯಾಂತಿ ಕುತಶ್ಚನ ||6||

ಕೈ, ಕಾಲು, ಬೆರಳು, ಮುಖ, ದೇಹ ಮುಂತಾದವುಗಳಿಂದ ನಾನು ಕ್ರಿಯೆಗಳನ್ನು ಮಾಡಿರುವೆ. ನಾನು ಮಾಡಿದ ಒಂದೊಂದು ಕ್ರಿಯೆಗಳಿಗೆ ನಿನ್ನ ಒಂದೊಂದು ರೂಪಗಳು ಕಾರಣ.

ಆ ರೂಪಗಳು ನನ್ನ ಕ್ರಿಯೆಗಳಲ್ಲಿ ಸನ್ನಿಹಿತವಾಗಿವೆ. ಅಂದರೆ ನಿನ್ನಯ ಆಯಾ ಕ್ರಿಯಾತ್ಮಕ ರೂಪಗಳಿಂದ ನನ್ನ ಒಂದೊಂದು ಕ್ರಿಯೆಗಳು ಆಗಿವೆ.

ಅಂದಮೇಲೆ ನಾನೆಲ್ಲಿ ಈ ತಪ್ಪು ಕ್ರಿಯೆಗಲನ್ನು ಮಾಡಿದೆ? ನಾನೆಲ್ಲಿ ಸ್ವತಂತ್ರ? ಇಷ್ಟು ಮಾತ್ರವಲ್ಲ. ನಾನು ಕ್ಷಣಬಿಡದೆ ನಾಲಿಗೆಯಿಂದ ಮಾತಾಡುವೆ.

ನಾನು ನುಡಿದ ನುಡಿಯಲ್ಲಿ ನಿನ್ನ ಸನ್ನಿಧಾನವಿದೆ. ನಿನ್ನ ರೂಪವಿದೆ. ಆ ನಿನ್ನ ರೂಪವೇ ನನ್ನ ನುಡಿಗೆ ಮುಖ್ಯ ಕಾರಣ.

ಅಂದಮೇಲೆ, ನಾನು ನುಡಿವ ಲೆಕ್ಕವಿಲ್ಲದಷ್ಟು ನುಡಿಗಳಿಗೆ ಕಾರಣವಾದ ನಿನ್ನ ಶಬ್ದಮೂರ್ತಿಗಳು ನನ್ನ ತಪ್ಪು ನುಡಿಗೆ ಕಾರಣ. ನಾನೆಲ್ಲಿ ಸ್ವತಂತ್ರ?

ಕಾಮಪೂರ್ವಕವೃತ್ತಯೋಽಪಿ ಹಿ ತೇ ಸುಖಾತ್ಮಕಮೂರ್ತಿಷು
ವ್ಯಕ್ತಿಕಾರಣಭಾವತೋ ನ ಚ ದೂಷಣಾಯ ಭವಂತಿ ಯೇ
ನೈವ ಜಾನತ ಈ ದೃಶೀಂ ಸ್ಥಿತಿಮಾತ್ಮನೋ ಹ್ಯಖಿಲಾತ್ಮನೋ
ಸಾಧುಸಾಧು ಚ ಸರ್ವಮೇವ ಹಿ ತೇಷು ದೋಷಕರಂಭವೇತ್ ||7||

ದೇಹ, ಇಂದ್ರಿಯ, ವಾಕ್ಕುಗಳಂತೆ ಮನಸ್ಸಿನದೂ ಇದೇ ಹಣೆಬರಹ.

ನನ್ನ ಮನಸ್ಸಿಗೆ ನಾನಾ ಒಲವುಗಳು, ಕಾಮ, ಸಂಕಲ್ಪ, ವಿಚಿಕಿತ್ಸೆ, ಶ್ರದ್ಧೆ, ಅಶ್ರದ್ಧೆ, ಧೃತಿ, ಅಧೃತಿ, ಹ್ರೀ, ಧೀ, ಭೀ ಮುಂತಾಗಿ.

ಈ ವೃತ್ತಿಗಳಲ್ಲಿ ನಿನ್ನ ಒಂದೊಂದು ರೂಪಗಳ ಸನ್ನಿಧಾನವಿದೆ. ಆಯಾ ವೃತ್ತಿಯ ರೂಪದಲ್ಲಿ ನೀನೇ ಪ್ರಕಟನಾದಾಗ ನನ್ನ ಮನಸ್ಸಿಗೊಂದು ವೃತ್ತಿ, ಒಲವು ಉಂಟಾಗುವದು.

ಈ ನಿಟ್ಟಿನಲ್ಲಿ ಸಕಲ ದೇಹ, ಇಂದ್ರಿಯ, ವಾಕ್, ಮನಸ್ಸುಗಳಿಂದ ಮಾಡುವ ಕರ್ಮಗಳೆಲ್ಲ ನಿನ್ನಿಂದ ಆದವು, ನೀನೇ ಮಾಡಿದಿ, ಎಂತೆಲ್ಲ ತಿಳಿದವನಿಗೆ ಪಾಪ, ಪುಣ್ಯ ಎನ್ನುವುದುಂಟೆ?

ನಾನು ಇದನ್ನೆಲ್ಲ ಬಲ್ಲೆ. ಆದ್ದರಿಂದ ನನಗೆ ಯಾವುದೇ ಪಾಪಲೇಪವಿಲ್ಲ.

ನೀನೇ ಸ್ವತಂತ್ರ ಕರ್ತೃ, ನಾನು ನಿನಗೆ ಪರಾಧೀನ. ಅದನ್ನು ಅರಿತ ನನಗೆ ಎಲ್ಲಿಯ ಪಾಪ? ಎಲ್ಲಿಯ ದೋಷ?

ಪುಣ್ಯಪಾಪಮಪಿ ತ್ವಮೇವ ಹಿ ದೇವ ಗುಹ್ಯಮಿದಂ ಪರಂ
ತ್ವಂ ತ್ವನಾದಿತ ಏವ ಪೂರ್ವಜ ಪೂರ್ವಕಾರಣ ಮೇ ಪ್ರಿಯ
ಕಿಂ ಕರೋತಿ ಹಿ ಕಿಂಕರೋ ಯಮರಾಜಕೋಪನಿಯೋಜಿತಃ
ತೇವಿನ್ನೈವ ವದಂತಿ ನಿರ್ಣಯಮತ್ರ ಕಿಂ ಮುನಯೋಽಪಿ ಭೋ ||8||

ದೇಹೇಂದ್ರಿಯ ಮನಸ್ಸುಗಳೂ, ಅವುಗಳಿಂದಾದ ಕರ್ಮಗಳೂ ಎಲ್ಲವೂ ನಿನ್ನ ಅಧೀನ, ನಿನ್ನ ಅಧಿಷ್ಠಾನ ಎನ್ನುವ ಈ ಹಿಂದಿನ ಮಾತಿರಲಿ.

ಈ ಕರ್ಮಗಳಿಂದ ಆದ ಪುಣ್ಯ ಪಾಪಗಳು ಎಂದರೇನು? ಅವೇನು ಸ್ವತಂತ್ರವೇ? ನೀನೇ ಪುಣ್ಯ, ನೀನೇ ಪಾಪ. ಪುಣ್ಯ ಪಾಪಗಳೆರಡೂ ನಿನ್ನ ಅಧೀನ. ಪುಣ್ಯದಲ್ಲಿ ಪುಣ್ಯವೆಂಬ ಹೆಸರಿನಿಂದ, ಪಾಪದಲ್ಲಿ ಪಾಪನೆಂಬ ಹೆಸರಿನಿಂದ ನೀನೇ ಇರುವಿ. ಅವೆರಡನ್ನು ನೀನೇ ನಿಯಮಿಸುವಿ. ಇದು ಅತಿ ಗೂಢವಾದ ತತ್ವ.

ಈ ತತ್ವ ಅನೇಕ ಜ್ಞಾನವಂತರಿಗೂ ತಿಳಿದಿಲ್ಲ. ಇನ್ನು ಈ ಪಾಪಗಳಿಂದಾಗಿ ಯಮ ತನ್ನ ಭಟರಿಗೆ ಆದೇಶಿಸಿ, ನನ್ನನ್ನು ಎಳೆತಂದು ನರಕಕೂಪದಲ್ಲಿ ನೂಕಬೇಕು.

ಆ ಯಮಭಟರು ಯಾರು?ಆ ಯಮನಾದರೂ ಎಷ್ಟರವ? ಇವರೇನು ಸ್ವತಂತ್ರರೇ? ನಿನ್ನ ದಾಸರಿವರು. ಇವರೆಲ್ಲ ಗೊಂಬೆಗಳು, ಬೆದರು ಗೊಂಬೆಗಳು ಮಾತ್ರ.

ನೀನವರಲ್ಲಿರುವ ಅಂತರಾತ್ಮ. ನೀನೇ ಸ್ವತಂತ್ರ. ನಿನ್ನ ಪ್ರೇರಣೆಯಿಂದ ಅವರು ನನ್ನನ್ನು ನರಕಕ್ಕೆ ತಳ್ಳಬಹುದು. ನಿನ್ನನ್ನೇ ನಾನು ಒಲಿಸಿಕೊಂಡ ಮೇಲೆ ನನಗೇತರ ಭಯ.

ಯಾಃ ಸಹಸ್ರಶತಾಧಿಕಾ ಅಪಿ ಕೋಟಯಶ್ಚ ತತೋಽಧಿಕಾ
ವೃತ್ತಯೋ ಮಮ ನಿತ್ಯಮೇವ ಚ ತಾಸು ತೇ ಬಹುರೂಪತಾ
ಕ್ಷೇತ್ರಜೋಽಪಿ ಹಿ ಪುತ್ರ ಏವ ಮಮೇಶ್ವರೋಽಸಿ ತಥಾಪಿ ಮಾ
ನೋದ್ಧರಿಷ್ಯಸಿ ಪುತ್ರತೈವ ಸುಶತ್ರುಭಾವಮಥಾಪ್ನುಯಾತ್ ||9||

ದೇಹೇಂದ್ರಿಯಗಳಂತೆ ಮನಸ್ಸು ನನ್ನ ಕ್ಷೇತ್ರ. ಆ ಮನಸ್ಸಿನಲ್ಲಿ ನೂರು, ಸಾವಿರ, ಲಕ್ಷ, ಕೋಟಿ ವೃತ್ತಿಗಳು ನನ್ನಿಂದ ಹುಟ್ಟುತ್ತವೆ.

ಅವುಗಳಲ್ಲಿ ನಿನ್ನ ಒಂದೊಂದು ರೂಪವಿದೆ. ಕೋಟಿ ಕೋಟಿ ರೂಪಗಳಿಂದ ನೀನು ನನ್ನಿಂದ ನನ್ನ ಕ್ಷೇತ್ರದಲ್ಲಿ ಜನಿಸಿದಂತಾಯಿತು.

ಅಂದಮೇಲೆ ನೀನು ನನ್ನ ಕ್ಷೇತ್ರಜ ಪುತ್ರ. ಪುತ್ರ ಎಂದರೆ ಪುತ್ ಎಂಬ ನರಕದಿಂದ ಉದ್ಧರಿಸುವವನು. ಕಾರಣ ನೀನು ನನ್ನನ್ನು ನರಕಪಾತದಿಂದ ಉದ್ಧರಿಸದಿದ್ದರೆ ಪುತ್ರ ಹೇಗೆ?

ನನ್ನ ಪುತ್ರನಾಗಿಯೂ, ಉದ್ಧರಿಸಲು ಪರಮಸಮರ್ಥನಾಗಿಯೂ, ನನ್ನನ್ನು ನರಕದಲ್ಲಿ ನೂಕಿದರೆ ನೀನು ನನಗೆ ಶತ್ರು ಆಗಿರುವಿ. ಓ ಎನ್ನ ದೊರೆ! ನನ್ನನ್ನು ಉದ್ಧರಿಸು.

ಭಾರತೇ ಭುವಿ ವಿಪ್ರಜನ್ಮ ಸುದುರ್ಲಭಂ ಯದಿ ಮನ್ಯಸೇ
ಸಾಧನಂ ಕುರು ದೇವ ಪೂರ್ವಮಲಂತು ತೇಽನುಕರೋಮ್ಯಲಮ್
ಪ್ರತ್ಯವಾಯವಚಃ ಕೃತೇಪಿ ಚ ಸರ್ವಥಾ ಹ್ಯಕೃತೌ ನಿಷೇ-
ಧೋಕ್ತಿರಪ್ಯಕೃತಸ್ಯ ಶಾಸ್ತ್ರಗತಿಜ್ಞವರ್ಯ ಕೃತೌ ಭವೇತ್ ||10||

"ಭೂಮಿಯಲ್ಲಿ, ಭಾರತದಲ್ಲಿ, ಬ್ರಾಹ್ಮಣಜನ್ಮ ಬಲು ದುರ್ಲಭ. ಅಂಥ ಜನ್ಮ ದೊರೆತಾಗ ಸಾಧನೆ ಮಾಡು" ಎಂದು ನನಗೆ ಹೇಳಬೇಡ.

ನೀನು ಸಾಧನೆಮಾಡು, ನಾನು ನಿನ್ನನ್ನು ಅನುಕರಿಸುವೆ.

ನೀನು ಸ್ವತಂತ್ರ, ನಾನು ಪರತಂತ್ರ, ನೀ ಮಾಡಿದರೆ ನಾ ಮಾಡಬಲ್ಲೆ.

"ತಾನು ಸ್ವತಂತ್ರ ಕರ್ತೃ" ಎಂದು ತಿಳಿದವನಿಗೆ ಮಾತ್ರ ಇದೆಲ್ಲ ಮಾಡು ಇದೆಲ್ಲ ಮಾಡಬೇಡ ಎಂಬ ವಿಧಿ ನಿಷೇಧಗಳು ಅಂಟುತ್ತವೆ.

ಮತ್ತು ವಿಹಿತವನ್ನು ಮಾಡದಿದ್ದರೆ ಹಾಗೂ ನಿಷಿದ್ಧವನ್ನು ಮಾಡಿದರೆ ಪ್ರತ್ಯವಾಯ ಪಾಪಗಳು ಬರುತ್ತವೆ.

ಹೀಗೆಂದು ಶಾಸ್ತ್ರಗತಿಜ್ಞವರ್ಯರಾದ ಶ್ರೀಮದಾನಂದತೀರ್ಥ ಭಗವತ್ಪಾದಾಚಾರ್ಯರು ಶಾಸ್ತ್ರಗಳಲ್ಲಿ ನಿರ್ಣಯಿಸಿದ್ದಾರೆ.

ಕರ್ತೃತಾ ತವ ಪೂಜ್ಯತಾಪಿ ಹಿ ಸರ್ವಕರ್ಮ ವಿನಿಶ್ಚಿತಾ-
ಪ್ಯೇತಯೋರಥ ಚಿಂತನಾ ಕಮಲೇಶ ತೇದ್ಯ ವಿಪಶ್ಚಿತಾ
ಯೇನ ಕೇನ ಮಿಷೇಣ ಸಂತತಮಾದರೇಣ ಮನೋಗತಿಃ
ಶ್ರೀ ಹರೇಶ್ಚರಣಾಬ್ಜಯೋರಿದಮೇವ ಸಾಧನಮೀರಿತಮ್ ||11||

ಓ ಸ್ವತಂತ್ರ! ಸರ್ವ ಕರ್ಮಗಳಿಗೆ ನೀನೇ ಕರ್ತೃ.

ಓ ದೇವ! ಸರ್ವಕರ್ಮಗಳಿಂದ ನೀನೇ ಪೂಜ್ಯ.

ಕರ್ಮಗಳಿಗೆ ಯಾರೂ ಸ್ವತಂತ್ರಕರ್ತೃವಲ್ಲ, ಕರ್ಮಗಳಿಂದ ಯಾರೂ ಮುಖ್ಯ ಪೂಜ್ಯರಲ್ಲ. ಇದು ಶಾಸ್ತ್ರವಿನಿಶ್ಚಿತ ಮಾತು.

ವಿಪಶ್ಚಿತ್ ಪುರುಷ ನಿನ್ನ ಕರ್ತೃತ್ವ ಪೂಜ್ಯತ್ವಗಳನ್ನು ಎಂದೆಂದಿಗೂ ಚಿಂತಿಸುತ್ತಿರಬೇಕು. ಮಾತ್ರವಲ್ಲ, ಯಾವುದೋ ಒಂದು ನಿಮಿತ್ತ, ಒಂದು ಉಪಾಯ, ಒಂದು ನೆಪದಿಂದ ಶ್ರೀಹರಿಯ ಪಾವನಪಾದಾಬ್ಜಗಳಲ್ಲಿ ಮನಹರಿಸಬೇಕು. ಇದುವೇ ಹಿರಿದಾದ ಸಾಧನೆ.

ಏತದೇವ ಚ ಯೋಗ್ಯತಾಪ್ರವಿಭೇದತೋ ವಿವಿಧಾತ್ಮನಾಂ
ಸಂಸ್ಫುರತ್ಯಖಿಲಸ್ಯ ತತ್ತದವಸ್ಥಯಾ ಹ್ಯನುರೂಪಯಾ
ಸ್ನಾನದಾನಜಪಾಗ್ನಿಹೋತ್ರಸದಿಷ್ಟಿಪೂರ್ವತಯಾ ತಥಾ
ಪೈತೃಕಾದಿಸಮಸ್ತಕರ್ಮತಯಾಪಿ ಕಾಮ್ಯತಯಾ ಪುನಃ **॥12॥**

ಶ್ರೀಹರಿಯನ್ನು ಒಂದಿಲ್ಲ ಒಂದು ನಿಮಿತ್ತದಿಂದ ನೆನೆಯುವದೇ ಸಾಧನೆ.

ಈ ಸಾಧನೆ ನಾನಾ ಯೋಗ್ಯತೆಯ ಜನರಿಗೆ ಬೇರೆ ಬೇರೆ ತೆರನಾಗಿ ಸ್ಫುರಿಸುವದು, ರುಚಿಸುವದು.

ಇದಕ್ಕೆ ಅವರವರ ಯೋಗ್ಯತೆಯ ಜೊತೆಗೆ ಅವಸ್ಥೆಯೂ ಕಾರಣ.

ಕೆಲವರಿಗೆ (ಕರ್ಮಿಗಳಿಗೆ) ಸ್ನಾನ, ದಾನ, ಜಪ, ತಪ, ಅಗ್ನಿಹೋತ್ರ, ಇಷ್ಟಿ, ಶ್ರಾದ್ಧ, ಕಾಮ್ಯಕರ್ಮ ಮುಂತಾದ ನಿಮಿತ್ತಗಳಿಂದ ದೇವರಲ್ಲಿ ಮನ ಹರಿಸಲು ಸಾಧ್ಯ.

ಇನ್ನು ಕೆಲವರಿಗೆ (ಜಿಜ್ಞಾಸುಗಳಿಗೆ) ನಿತ್ಯಾನಿತ್ಯವಸ್ತುವಿವೇಕ ಇಹಾಮುತ್ರ ಫಲಭೋಗವಿರಾಗ ಶಮ ದಮ ಉಪರತಿ ತಿತಿಕ್ಷಾ ಮನಸ್ಸಮಾಧಾನ (ಭಕ್ತ್ಯಾದಿ)ಗಳಿಂದ ದೇವರಲ್ಲಿ ಮನವಿಡಲು ಶಕ್ಯ.

ಇನ್ನು ಕೆಲವರು (ಅಧ್ಯಾತ್ಮವೇತ್ತೃಗಳು) ಅನಿರುದ್ಧಾದಿರೂಪಧ್ಯಾನ, ತ್ರಿವಿಧ ಪೂಜೆ, ಶರಣಾಗತಿ, ಸರ್ವ ಸಮರ್ಪಣೆ ಮುಂತಾದವುಗಳಿಂದ ದೇವರನ್ನು ನಿರಂತರ ನೆನೆಯುವರು.

ಏವಮೇಷ ಹರಿಶ್ಚ ದೇವ ಮುನೀಷ್ಟ ಮಾತೃಮುಖಾತ್ಮನಾ
ಸಂಸ್ಫುರತ್ಯಖಿಲಸ್ಯ ತತ್ತದವಸ್ಥಯಾ ಹ್ಯನುರೂಪಯಾ
ಯದ್ಯದೋ ಹ್ಯುಭಯಂ ಚ ದೈವವಶೇನ ವೇತ್ತಿ ನಿಜಾತ್ಮನಾ
ತದ್ದಿನಪ್ರಭೃತೀಹ ತಸ್ಯ ಕರಸ್ಥಿತೈವ ಹಿ ಮುಕ್ತತಾ **॥13॥**

ದೇವತೆಗಳು, ಮುನಿಗಳು, ಇಷ್ಟಜನರು, ತಂದೆ, ತಾಯಿ ಎಂಬುದಾಗಿ ಭಗವಂತನೇ ಅವರವರಿಗೆ ಆಯಾ ಯೋಗ್ಯತೆ ಹಾಗೂ ಅವಸ್ಥೆಗಳನ್ನು ಅನುಸರಿಸಿ ತೋರುವನು.

ಅಂದರೆ, ಕೆಲವರು ದೇವತೆಗಳನ್ನು ಆರಾಧಿಸಿ, ಕೆಲವರು ಮುನಿಗಳನ್ನು, ಹಲವರು ತಂದೆ ತಾಯಿಗಳನ್ನು ಸೇವಿಸಿ, ಇನ್ನು ಕೆಲವರು ಇಷ್ಟಜನರನ್ನು ಸುಖಿಪಡಿಸಿ ಭಗವಂತನ ಸೇವೆಯೆನ್ನುತ್ತಾರೆ.

ದೇವ, ಮುನಿ, ಮಾತಾಪಿತೃ, ದೀನ, ದುಃಖಿತ, ರೋಗಿಗಳಲ್ಲಿ ಆ ಆ ರೂಪಗಳಿಂದಿದ್ದು ಭಗವಂತನೇ ಆಯಾ ಸೇವೆ, ಉಪಕಾರ, ಅನುಕಂಪಗಳನ್ನು ಸ್ವೀಕರಿಸುವನು.

ಇದೆಲ್ಲ ಸಾಧನೆಯ ನಾನಾ ಬಗೆ. ಇದರರ್ಥ ಸ್ಪಷ್ಟಪಡಿಸುವುದಾದರೆ ತಂದೆ ತಾಯಿಗಳ ಸೇವೆಯೂ ಅಂತರ್ಯಾಮಿಯಾದ ದೇವರ ಸೇವೆ. ದೀನ ದುಃಖಿತ ರೋಗಿಗಳ ಉಪಕಾರ, ಉಪಚಾರಗಳೂ ಭಗವಂತನ ಭಜನೆಯೇ.

ಈ ತೆರನಾದ ದಿವ್ಯ ಅನುಸಂಧಾನ ದೇವರ ಪರಮಕಾರುಣ್ಯದಿಂದ ಯಾವ ದಿನ ಯಾವ ಭಕ್ತನಿಗೆ ದೊರೆಯುವದೋ ಆ ದಿನವೇ ಮುಕ್ತಿ ಆ ಭಕ್ತನ ಕೈಗೆ ದೊರಕಿದಂತೆ. ಇದರಲ್ಲಿ ಸಂದೇಹ ಬೇಡ.

(ಬಿಂಬೋಪಾಸನೆ)

ಇನ್ನು ಭಗವಂತನ ಬಿಂಬರೂಪವನ್ನು ಶಿರಸ್ಸಿನಿಂದ ಪಾದದವರೆಗೆ ಚಿಂತಿಸಬೇಕು. ದೇವರ ದೇಹವು ನಮ್ಮ ದೇಹದಂತೆ ತಲೆ, ಕಣ್ಣು, ಕೈ, ಕಾಲು ಮುಂತಾದ ಅವಯವಗಳಿಂದ ಕೂಡಿದುದು.

ಆ ಎಲ್ಲ ಅವಯವಗಳಲ್ಲಿ ಹಾಗೂ ಅಂಗಾಂಗಗಳಲ್ಲಿ ರಕ್ತ, ಮಾಂಸ, ಮೇಧಸ್ಸು, ಅಸ್ಥಿ, ಚರ್ಮ, ನರ ಮುಂತಾದವುಗಳು ಇವೆ.

ಆದರೆ, ನಮ್ಮ ರಕ್ತಮಾಂಸಗಳಂತೆ ಪ್ರಾಕೃತ, ಭೌತಿಕ, ಕ್ಷುದ್ರ, ದುರ್ಗಂಧಿ, ನಶ್ವರ ಆದುದಲ್ಲ.

ಪ್ರತಿಯೊಂದು ಅಂಗಾಂಗಗಳು ದಿವ್ಯ, ಚಿನ್ಮಯ, ಪರಿಪೂರ್ಣ, ಶಾಶ್ವತ, ಆನಂದರೂಪ.

ಮಾತ್ರವಲ್ಲ, ಒಂದೊಂದು ಅಂಗವೂ ಒಂದೊಂದು ಭಗವದ್ರೂಪವೇ. ದೇವರೇ ದೇವರ ಅಂಗವಾಗಿರುವನು.

ಇದೆಲ್ಲ ಭಗವಂತನ ವಿಚಿತ್ರ ಲೀಲೆ. ಮಾನವನಿಗೆ ಎಟುಕದ ದಿವ್ಯ ಅದ್ಭುತ. ಈ ನಿಟ್ಟಿನಲ್ಲಿ ದೇವರ ವಿಗ್ರಹವನ್ನು ತಿಳಿಯೋಣ.

ನಾ ಶಿರಃ ಸಖ ತೇ ಪ್ರಕೇ ಸುಲಲಾಟಕಂ ಯುಗಲಂ ಭ್ರುವೋಃ
ನಾಕ್ಷಿಣೇ ಕ ಪರಸ್ಯ ಸತ್ತ್ವನಿ ಕರ್ಣಕೇಥ ಕಪೋಲಕೇ
ಸಂ ನೃದೇವ ಸುನಾಸಿಕಾ ಸಖ ವೋತ್ತರೋಷ್ಠಮಥಾಧರಂ
ಸಂ ಪ್ರ ದಂತಸುಪಂಕ್ತಿಯುಗ್ಮ ಅನಂತ ಸಂ ತವ ಜಿಹ್ವಿಕಾ ||14||

ಭಗವಂತನ ತಲೆ ನಾರಾಯಣ

ಹಣೆ ಪ್ರದ್ಯುಮ್ನೋದ್ಭೂತ ಕೇಶವ.

ಎರಡು ಹುಬ್ಬುಗಳು ನಾರಾಯಣ.

ಕಣ್ಣು ಕಪಿಲ.

ಎರಡು ಕಿವಿ ಅನಿರುದ್ಧ.

ಎರಡು ಕೆನ್ನೆ ಸಂಕರ್ಷಣ.

ಮೂಗು ನರಸಿಂಹ.

ಮೇಲ್ದುಟಿ ವಾಸುದೇವ.

ಕೆಳದುಟಿ ಸಂಕರ್ಷಣ.

ಎರಡು ದಂತಪಂಕ್ತಿ ಪ್ರದ್ಯುಮ್ನ.

ನಾಲಿಗೆ ಸಂಕರ್ಷಣ.

ತೇ ಮುಖಂ ವಸುಕಂಠಕೂಬರಮತ್ರ ವೋದಿತಗೋ ವಿಭೌ
ವತ್ರಿ ದಕ್ಷಿಣಕಂಧರಂ ಪರಮತ್ರ ನಾಹ್ಯ ಸುಕಂಧರಮ್
ನಾಜದಾ ಕಕುದತ್ರ ನಾಪ ಸುಪೃಷ್ಠಮತ್ರ ಸಹಸ್ತಕೌ
ಊರ್ಧ್ವದಕ್ಷಿಣಬಾಹುರೀದೃಶವಾಮಬಾಹುರಪೀದೃಶಮ್ ||15||

ದಕ್ಷಿಣಾಧರಬಾಹುರಸ್ತು ಸಹಸ್ರಕೋಪ್ಯಥ ತಾದೃಶೋ
ವಾಮಬಾಹುರುದಾಹೃತಃ ಪ್ರಚುತುರ್ಭಿರೇವ ಕರಾಂಕ ಭೋಃ
ಪಂಚಭಿಃ ಕರಗಾಂಗುಲೀನಖ ದೇವ ತೇ ಹೃದಯಂ ಪ್ರಮಾ
ತೇ ನ್ಯುರಸ್ ಸ್ತನಯುಗ್ಮಮತ್ರ ನೃಜ್ಯೈತ್ರ ಸೂದರಮತ್ರ ತೇ ||16||

ಪ್ರಾಪ್ತನಾ ಸಖಿ ದಕ್ಷಕುಕ್ಷಿಕಮತ್ರ ವಾವಿ ವವಾ ಪರಂ
ನಾಭಿರತ್ರ ನ್ಯರಾ ಕೃ ಕಾ ತ್ರಿಭಿರುಕ್ತಸಂಸ್ಥವಲಿತ್ರಯ
ಬಸ್ತಿರತ್ರ ನೃ ವಾ ಸುಮೇಢ್ರಂ ಅಥೋ ಗುದಂ ವೃಷಣಂ ಚವಾ
ವಾಪ್ತನಾ ಕಟಿರತ್ರ ತೇ ಪ್ರಿಯ ವಾಪ್ತ ವೋರು ಯುಗಂಹರೇ ||17||

ದೇವರ ಮುಖ ಪರಶುರಾಮ.

ಕಂಠ ವಾಸುದೇವೋದ್ಭೂತ ಗೋವಿಂದ.

ಬಲಹೆಗಲು ವರಾಹೋದ್ಭೂತ ತ್ರಿವಿಕ್ರಮ.

ಎಡಹೆಗಲು ನಾರಾಯಣೋದ್ಭೂತ ಹೃಷಿಕೇಶ.

ಕತ್ತು ನಾರಾಣೋದ್ಭೂತ ದಾಮೋದರ.

ಬೆನ್ನು ನಾರಾಯಣೋದ್ಭೂತ ಪದ್ಮನಾಭ.

ನಾಲ್ಕು ಬಾಹು, ಕೈಗಳು ಹಾಗೂ ಕೈಗಳಲ್ಲಿರುವ ಚಿಹ್ನೆಗಳು ಇವೆಲ್ಲ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಅನಿರುದ್ಧರು.

ಎಲ್ಲ ಕೈಗಳಲ್ಲಿರುವ ಐದೈದು ಬೆರಳುಗಳು ನಾರಾಯಣಾದಿ ಐದು ರೂಪಗಳು.

ಬೆರಳಿನ ಉಗುರುಗಳು ನಾರಾಯಣಾದಿಗಳು.

ಎದೆ ಪ್ರದ್ಯುಮ್ನೋದ್ಭೂತ ಮಾಧವ.

ಉರಸ್ಸು ಅನಿರುದ್ಧ.

ಎರಡು ಸ್ತನಗಳು ನರಸಿಂಹ.

ಹೊಟ್ಟೆ ಪ್ರದ್ಯುಮ್ನೋದ್ಭೂತ ನಾರಾಯಣ.

ಬಲಕುಕ್ಷಿ ವಾಸುದೇವೋದ್ಭೂತ ವಿಷ್ಣು.

ಎಡಕುಕ್ಷಿ ವರಾಹೋದ್ಭೂತ ವಾಸುದೇವ.

ನಾಭಿ ನರಸಿಂಹ.

ಹೊಟ್ಟೆ ಮುಂತಾದವುಗಳಲ್ಲಿರುವ ಮೂರು ಗೆರೆಗಳು ರಾಮ, ಕೃಷ್ಣ, ಕಪಿಲರು.

ಬಸ್ತಿ ನರಸಿಂಹ.

ಮೇಢ್ರ ವಾಸುದೇವ.

ಗುದ ವಾಸುದೇವ.

ವೃಷಣ ವಾಸುದೇವ.

ಸೊಂಟ ವಾಸುದೇವೋದ್ಭೂತ ನಾರಾಯಣ.

ಎರಡು ತೊಡೆಗಳು ವಾಸುದೇವೋದ್ಭೂತ ವಾಸುದೇವ.

ಜಾನುನೀ ತವ ವಾಸಂ ಅತ್ರ ಸದಿಷ್ಟದಾನಸಮರ್ಥಜಂ-
ಘಾಭಿಧಂ ಪರ ವಾಪ್ರ ತೇ ಪ್ರಪದಾಭಿಧಂ ಪ್ರಿಯ ವಾನಿ ತೇ
ಪಾದಯುಗ್ಮಮಿಹಾಪಿ ಸನ್ನಖಲಕ್ಷ್ಮ ತಚ್ಚತುರಾತ್ಮನಾ
ಪಂಚಭಿಃ ಪದಗಾಂಗುಲೀನಖ ರೋಮ ಚರ್ಮ ಚ ನಾ ಪ್ರಭೋ ||18||

ದೇವರ ಎರಡು ಮೊಣಕಾಲುಗಳು ವಾಸುದೇವೋದ್ಭೂತಸಂಕರ್ಷಣ.

ಸಜ್ಜನರಿಗೆ ಇಷ್ಟಾರ್ಥಗಳನ್ನು ಕರುಣಿಸುವ ತೊಡೆಗಳ ಹಿಂಭಾಗ ವಾಸುದೇವೋದ್ಭೂತ ಪ್ರದ್ಯುಮ್ನ.

ಕಾಲಿನ ಮೇಲುಭಾಗ ವಾಸುದೇವೋದ್ಭೂತ ಅನಿರುದ್ಧ.

ಎರಡು ಕಾಲು ಸಂಕರ್ಷಣ.

ಅಲ್ಲಿಯ ಐದು ಬೆರಳುಗಳು ಹಾಗೂ ಉಗುರುಗಳು ನಾರಾಯಣಾದಿ ಐದು ರೂಪಗಳು.

ಪಾದಗಳಲ್ಲಿರುವ ಧ್ವಜವಜ್ರಾದಿ ಚಿಹ್ನೆಗಳು ವಾಸುದೇವಾದಿ ರೂಪಗಳು.

ಮೈಮೇಲಿರುವ ರೋಮಗಳು ನಾರಾಯಣ.

ಚರ್ಮ ನಾರಾಯಣ.

ಚಕ್ಷುಷೀ ತವ ಚಾಕ್ಷಿಸಂಸ್ಥಿತ ಏವ ದೇವ ರಮಾಪತೇ
ಪ್ರಶ್ಚ ಚಕ್ಷುರನಿ ಕ್ರಮೇಣ ಚ ಕರ್ಣಗಂ ಪರಮಿಂದ್ರಿಯಮ್
ಘ್ರಾಣಕಂ ರಸನಂ ಚ ವಾ ಪ್ರ ಸಂ ಅತ್ರ ಸಂ ತ್ವಗತಿ ಪ್ರಭೋ
ವಾಕ್ ಚ ವಾ ಚತುರಾತ್ಮಕಂ ಕರಸಂಸ್ಥಪಾಣ್ಯಭಿಧೇಂದ್ರಿಯಮ್ ||19||

ಕಣ್ಣಿನಲ್ಲಿರುವ ಬಲ ಚಕ್ಷುರಿಂದ್ರಿಯವು ಪ್ರದ್ಯುಮ್ನ

ಎಡ ಚಕ್ಷುರಿಂದ್ರಿಯವು ಅನಿರುದ್ಧ.

ಕಿವಿಯಲ್ಲಿರುವ ಶ್ರೋತ್ರೇಂದ್ರಿಯ ವಾಸುದೇವ.

ಮೂಗಿನಲ್ಲಿರುವ ಘ್ರಾಣೇಂದ್ರಿಯ ಪ್ರದ್ಯುಮ್ನ.

ನಾಲಿಗೆಯಲ್ಲಿರುವ ರಸನೇಂದ್ರಿಯ ಸಂಕರ್ಷಣ.

ಚರ್ಮದಲ್ಲಿರುವ ತ್ವಗಿಂದ್ರಿಯ ಸಂಕರ್ಷಣ.

ನಾಲಿಗೆಯಲ್ಲಿರುವ ವಾಗಿಂದ್ರಿಯ ವಾಸುದೇವ.

ನಾಲ್ಕು ಕೈಗಳಲ್ಲಿರುವ ಪಾಣಿ ಇಂದ್ರಿಯ ವಾಸುದೇವಾದಿ ನಾಲ್ಕು ರೂಪಗಳು.

ಪಾದ ಪಾಯು ಸುಮೇಢ್ರಗಂ ತವ ಸಂ ಪ್ರ ನಾನಿ ಸುಮಾನಸಂ
ಬುದ್ಧಿರಪ್ಯಥ ತೇ ಪ್ರ ಕೋವಿದ ಕಾಮಪೂರ್ವಕವೃತ್ತಯಃ
ದ್ವಿತ್ರಿಪಂಚದಶಾಧಿಕಾಸ್ತವ ಭಾವುಕೇಷ್ವದಮೂರ್ತಯಃ
ಶಬ್ದಪೂರ್ವಕ ಪಂಚಕಂ ತವ ಪಂಚರೂಪಮಥ ಪ್ರಭೋ ||20||

ಕಾಲುಗಳಲ್ಲಿರುವ ಪಾದೇಂದ್ರಿಯ ಸಂಕರ್ಷಣ.

ಗುದದಲ್ಲಿರುವ ಪಾಯು ಇಂದ್ರಿಯ ಪ್ರದ್ಯುಮ್ನ.

ಮೇಢ್ರದಲ್ಲಿ ಉಪಸ್ಥ ಇಂದ್ರಿಯ ನಾರಾಯಣ.

ಮನಸ್ಸು ಅನಿರುದ್ಧ.

ಬುದ್ಧಿ ಪ್ರದ್ಯುಮ್ನ.

ಕಾಮ, ಪ್ರೇಮ, ದಯಾ, ಮುಂತಾದ ಎರಡು, ಮೂರು, ಐದು, ಹತ್ತು, ಮುಂತಾದ ಮನೋವೃತ್ತಿಗಳು ದೇವರ ನಾನಾ ರೂಪಗಳೇ.

ಇವೆಲ್ಲ ಭಕ್ತರಿಗೆ ಇಷ್ಟಪ್ರದವಾಗಿವೆ.

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ನಾರಾಯಣಾದಿ ಐದು ರೂಪಗಳು.

ಸ್ನಾನಭೋಜನಪಾನಪಾಲನಮೇಲನಾಗಮನಾರ್ಚನಾ
ಪ್ರಾಣನೋಚ್ಚಲನಾಭಿವಾದನಮಾರ್ಜನಾರ್ಜನಪೂರ್ವಕಮ್
ಸರ್ವಕರ್ಮ ಸನಾಮಕಂ ತವ ರೂಪಮೇವ ರಮಾಪತೇ
ಶಕ್ತಯೋಽಪ್ಯಥ ತತ್ರ ತತ್ರ ಚ ತೇ ಸ್ವರೂಪಸುಶಕ್ತಯಃ **||21||**

ಸ್ನಾನ, ಭೋಜನ, ಪಾನ, ಪಾಲನ, ಮೇಲನ, ಆಗಮನ, ಅರ್ಚನ, ಪ್ರಾಣನ, ಉಚ್ಚಲನ, ಅಭಿವಾದನ, ಮಾರ್ಜನ, ಅರ್ಜನ ಮುಂತಾದ ಎಲ್ಲ ಕರ್ಮಗಳೂ ನಿನ್ನದೊಂದೊಂದು ರೂಪಗಳೇ.

ಅಲ್ಲದೇ ಅಲ್ಲಲ್ಲಿ ಇರುವ ನಾನಾ ಶಕ್ತಿಗಳು ನಿನ್ನ ಶಕ್ತಿಗಳೇ.

ಅಂದರೆ, ಒಂದೊಂದು ಕ್ರಿಯೆಗಳಿಗೂ ದೇವರ ಒಂದೊಂದು ರೂಪಗಳಿವೆ.

ಒಂದೊಂದು ಶಕ್ತಿಗಳಿಗೂ ತತ್ತನ್ನಾಮಕ ರೂಪಗಳಿವೆ.

ಹೀಗೆ ಸಕಲ ಚೇತನಾಚೇತನಗಳ ಅನಂತಕ್ರಿಯೆಗಳಿಗೆ, ಅನಂತ ಶಕ್ತಿಗಳಿಗೆ ದೇವರ ಅನಂತಾನಂತ ಕ್ರಿಯಾ ಶಕ್ತಿಗಳು ನಿಯಾಮಕವಾಗಿವೆ.

ದೇವರ ಆ ಅನಂತ ಕ್ರಿಯಾಶಕ್ತಿಗಳೆಲ್ಲವೂ ದೇವರ ಒಂದೊಂದು ರೂಪಗಳೇ.

ಮತ್ಸ್ಯ ಏವ ಕಿರೀಟಮಂಬುಜನಾಭ ತೇ ಭವ ಈದೃಶಃ
ಕೂರ್ಮ ಏವ ಸುವರ್ಣಕುಂಡಲಮೀದೃಶಸ್ತವ ಸೂಕರಃ
ಕಂಠಭೂಷಣಮಾಶ್ರಿತಂ ತ್ವದುರಶ್ಚ ಸಿಂಹಜಸಿಂಹಕೋ
ಭೂಷಣಂ ತವ ಬಾಹುಸಂಸ್ಥಿತಮೀದೃಶಃ ಸಖ ವಾ ಹರೇ **||22||**

ಹೇ ಭಗವನ್! ನಿನ್ನ ಕಿರೀಟ (ಅನಿರುದ್ಧೋದ್ಭೂತ) ಮತ್ಸ್ಯರೂಪ.

ಕಣಕುಂಡಲ (ಅನಿರುದ್ಧೋದ್ಭೂತ) ಕೂರ್ಮರೂಪ.

ಕಂಠಭೂಷಣ (ಅನಿರುದ್ಧೋದ್ಭೂತ) ವರಾಹ.

ನಿನ್ನ ಉರಸ್ಸಿನಲ್ಲಿ ಕಂಗೊಳಿಸುವ ಮಣಿಮಾಲೆಗಳು ನರಸಿಂಹೋದ್ಭೂತ ನರಸಿಂಹ.

ತೋಳುಗಳಲ್ಲಿಯ ವಿಭೂಷಣಗಳು ನರಸಿಂಹೋದ್ಭೂತ ವಾಮನ.

ಆಶ್ರಿತಂ ಕಟಿಮತ್ರಭೂಷಣಮೀದೃಶಸ್ತವ ಭಾ ಹರೇ
ಪಾದಯುಗ್ಮಗತಂ ವಿಭೂಷಣಮತ್ರ ಸಂಭವರಾ ಪ್ರಭೋ
ಈದೃಶಂ ಚ ಕರೇಷು ಭೂಷಣಮೀದೃಶಂ ತ್ರಿಜಗತ್ಪತೇ
ತಾದೃಶೋಂಗುಲಿಭೂಷಣಂ ತವ ವಿಷ್ಣುಕೀರ್ತಿಸುತೋ ಹರೇ ||23||

ಓ ದೇವ! ನಿನ್ನ ಕಟಿಭೂಷಣ ನರಸಿಂಹೋದ್ಭೂತ ಭಾರ್ಗವರಾಮ.
ಎರಡು ಪಾದಗಳಲ್ಲಿಯ ವಿಭೂಷಣ ಸಂಕರ್ಷಣೋದ್ಭೂತ ರಾಮ.
ಕೈಗಳಲ್ಲಿಯ ಕಂಕಣ ಸಂಕರ್ಷಣೋದ್ಭೂತ ಕೃಷ್ಣ.
ಬೆರಳುಗಳ ಉಂಗುರ ಸಂಕರ್ಷಣೋದ್ಭೂತ ಕಲ್ಕಿ.

ಏತದೇವ ನವಾತ್ಮಕಂ ನವರತ್ನರೂಪಮನಂತ ತೇಽ
ನಂತಭೂಷಣಭೂಷಣಂ ನಿಜಲೀಲಯೈವ ಸುತೋಷಣಮ್
ಏಕಮೂರ್ತಿತಯಾ ಚ ಪಂಚತಯಾ ಚ ಪಂಚದಶಾತ್ಮನಾ
ತ್ರಿಂಶದಾದಿತಯಾ ಚ ಮಾನಸಪೂಜನೇ ಪ್ರತಿಭಾಸತೇ ||24||

ಕಿರೀಟಾದಿಗಳಲ್ಲಿಯ ನವರತ್ನಗಳೇ ಅನಿರುದ್ಧ ಪ್ರದ್ಯುಮ್ನ ಸಂಕರ್ಷಣೋದ್ಭೂತ ಮತ್ಸ್ಯಾದಿ ಒಂಬತ್ತು ರೂಪಗಳು. ಹೀಗೆ ನೀನು ಅನಂತಾನಂತ ಭೂಷಣಗಣಮಂಡಿತ. ಇದೆಲ್ಲ ನಿನ್ನ ಲೀಲೆ. ಇದೆಲ್ಲ ನಿನ್ನದೊಂದು ಆನಂದ.

ಓ ದೇವ! ನೀನು ಒಂದು ಮೂರ್ತಿಯಾಗಿ, ಐದು ರೂಪನಾಗಿ, ಹತ್ತು ಹದಿನೈದು ರೂಪನಾಗಿ, ಮೂವತ್ತು, ಐವತ್ತು, ನೂರು, ಸಾವಿರ, ಲಕ್ಷಾದಿ ರೂಪಗಳಿಂದ ಮಾನಸಪೂಜೆಯಲ್ಲಿ ಕಾಣುವಿ.

ದ್ರವ್ಯಕರ್ಮಗುಣಪ್ರಭೇದತ ಆಸ್ಯ ಆಸ್ಯಮಿತಿ ಕ್ರಮಾತ್
ಏತದೇವ ಚ ಸರ್ವಜೀವಗತಂ ತ್ವನಾದಿತ ಏವ ಹಿ
ಪ್ರಾತರುತ್ಥಿತ ಏವ ಸಂತತಮಾತನೋಮಿ ಸುಭಾಷಿತಂ
ತದ್ವಿರುದ್ಧಮಥಾಪಿ ತೇಽಸ್ತು ನ ಬಂದಿಗೀತಮಿತಿ ಪ್ರಭೋ ||25||

ದ್ರವ್ಯದಲ್ಲಿ ದ್ರವ್ಯರೂಪನಾಗಿ, ಕರ್ಮದಲ್ಲಿ ಕರ್ಮರೂಪನಾಗಿ, ಗುಣದಲ್ಲಿ ಗುಣರೂಪನಾಗಿ ನೀನು ಪ್ರತಿಷ್ಠಿತನಾಗಿರುವೆ.

ಅಲ್ಲದೇ, ನನ್ನ ಮುಖದಲ್ಲಿ ನಿನ್ನ ಮುಖ, ಕಣ್ಣಿನಲ್ಲಿ ಕಣ್ಣು, ನಾಲಿಗೆಯಲ್ಲಿ ನಾಲಿಗೆ, ಕೈಕಾಲುಗಳಲ್ಲಿ ಕೈಕಾಲುಗಳು ಇವೆ. ಹೀಗೆ ನೀನು ಅನಾದಿಯಿಂದ ಅನಂತ ಕಾಲದಲ್ಲಿ ಎಲ್ಲ ಜೀವರನ್ನು ನಿಯಮಿಸುತ್ತಿರುವೆ.

ನಾನು ಬೆಳಿಗ್ಗೆ ಎದ್ದು ಆಡುವ ಎಲ್ಲ ತರಹದ ಒಳ್ಳೆಯ ಹಾಗೂ ಕೆಟ್ಟ ಮಾತುಗಳೂ ನಿನ್ನ ಬಂದಿಗೀತ, ಬಂದಿಗಳು ಮಾಡುವ ಬೆಳಗಿನ ಸ್ತೋತ್ರವೆಂದು ತಿಳಿ.

ಕ್ಷಾಲನಂ ಪದಯೋರ್ಮುಖಸ್ಯ ಚ ಪಾಣಿಪಲ್ಲವಯೋಶ್ಚ ಗಂ-
ಡೂಷಣಂ ಸತತಂ ತವಾಸ್ತ್ವಿತಿ ಮಾನಸಂ ರಮತಾನ್ಮುದಾ
ಚಿತ್ರಭಾಷಿತಮತ್ರ ಕಿಂಚನ ಚೇದ್ಭವೇತ್ತದತಿ ಪ್ರಭೋ
ಗೀತವಾದ್ಯಪುರಸ್ಸರಂ ಯದಿ ತಚ್ಚ ತೇಸ್ತು ಮಹೀಪತೇ ||26||

ನಾನು ಮಾಡುವದೆಲ್ಲ ಹಾಗೂ ಮಾಡಿಕೊಳ್ಳುವದೆಲ್ಲ ನನ್ನ ಬಿಂಬರೂಪಿಯಾದ ನಿನಗೆ ಸಮರ್ಪಣೆ. ಪಾದಪ್ರಕ್ಷಾಲನೆ, ಮುಖಪ್ರಕ್ಷಾಲನೆ, ಪಾಣಿಪ್ರಕ್ಷಾಲನೆ, ಗಂಡೂಷ, ಬಗೆಬಗೆಯ ಮಾತುಗಳು, ಗೀತವಾದ್ಯಗಳಿಂದೊಡಗೂಡಿದ ಹಾಡುಗಳು ಇವೆಲ್ಲ ನಿನಗೇ ಸಮರ್ಪಿತ.

ಲಾಲನಂ ತನಯಾದಿಕಸ್ಯ ಚ ಪಾಲನಂ ಪಿತೃಪೂರ್ವಕೇ
ಮೇಲನಂ ಲಲನಾದಿಕೇಷ್ವನುಕೂಲನಂ ಚ ತವಾಸ್ತು ಭೋ
ಸ್ನಾನಮಸ್ತ್ವಭಿಷೇಚನಂ ತವ ತತ್ರ ಪೌರುಷಸೂಕ್ತಕಂ
ಮಂತ್ರಮಸ್ತ್ವನು ಧೌತವಸ್ತ್ರ ಯುಗ್ಮಮಸ್ತು ತವಾಂಬರಮ್ ||27||

ಮಕ್ಕಳ ಹಾಗೂ ಮೊಮ್ಮಕ್ಕಳ ಲಾಲನೆ, ತಂದೆ ತಾಯಂದಿರ ಪಾಲನೆ, ಮಡದಿ ಸ್ನೇಹಿತರೊಡನೆ ಮೇಲನ ಹಾಗೂ ಪ್ರೀತಿಯ ಸ್ನೇಹದ ಮಾತುಗಳು, ನಿನಗೇ ಸಮರ್ಪಿತ.

ನನ್ನ ಸ್ನಾನ ನಿನಗೆ ಅಭಿಷೇಕವಾಗಲಿ. ಅಲ್ಲಿ ಪುರುಷಸೂಕ್ತವೇ ಮಂತ್ರ. ನಾನುಡುವ ಒಗೆದ ಬಟ್ಟೆ ನಿನಗೆ ವಸ್ತ್ರ

ಆಸನಾಚಮನಂ ತವಾಸ್ತ್ವನು ಚಂದನಾದಿಭಿರಂಕನಂ
ಮಾಲಿಕಾದಿವಿಭೂಷಣಂ ತವ ವಂದನಂ ತ್ವಥ ಸಂಧ್ಯಯೋ
ಮಂತ್ರಸಂಸ್ತವಯನ್ತ್ರಪೂಜನಪೂರ್ವಕಂ ಪರಮೇಶ ತೇ
ಧ್ಯಾನ ಮೌನಸುಧಾರಣಾದಿಕಮಸ್ತು ತೇ ಪುರುಷೋತ್ತಮ ॥28॥

ಆಸನ, ಆಚಮನ, ಗೋಪಿಚಂದನಾದಿಗಳಿಂದ ಊರ್ಧ್ವಪುಂಡ್ರಧಾರಣ, ಹಾರ, ಅಲಂಕಾರ ಇದೆಲ್ಲವೂ ನಿನಗೆ ಸಮರ್ಪಿತ. ಸಂಧ್ಯಾವಂದನವೂ ನಿನಗೆ ಅರ್ಪಿತ. ಬಗೆಬಗೆಯ ಮಂತ್ರ, ಸ್ತುತಿ, ಯಂತ್ರ, ಪೂಜೆ ಎಲ್ಲವೂ ನಿನ್ನದೇ. ಧಾರಣ, ಧ್ಯಾನ, ಮೌನ ಮುಂತಾದವೆಲ್ಲವೂ ನಿನ್ನ ಸೇವೆ.

ಚಂದನಾದಿಭಿರಪ್ಯಲಂಕೃತಿರಸ್ತು ತೇ ತಿಲಕಂ ಚ ಭೋ
ದೇವ ಭೋಜನಪಾತ್ರಮಸ್ತು ಸುಪಾನಪಾತ್ರಮಥಾಸ್ತು ತೇ
ನಾರಿಕೇಲಫಲಾದಿಮಿಶ್ರಿತಮತ್ರ ವಸ್ತುತವಾಸ್ತು ಭೋ
ವ್ಯಂಜನಂ ಲವಣಂ ತಥಾಸ್ತು ಸುಪತ್ರಶಾಕಮಥಾಪರಮ್ ॥29॥

ಗಂಧಾಧಿಗಳಿಂದ ಅಲಂಕಾರ, ಅಕ್ಷತೆ ಮುಂತಾದ ತಿಲಕ, ಭೋಜನ ಪಾತ್ರೆ, ನೀರು ಕುಡಿಯುವ ಪಾತ್ರೆ, ಮುಂತಾದವನ್ನೆಲ್ಲ ನಿನಗೆ ಸಮರ್ಪಿಸುವೆ. ತೆಂಗಿನ ಕೊಬ್ಬರಿಯನ್ನು ಬೆರೆಸಿದ ತರ ತರಹದ ರುಚಿಪದಾರ್ಥವೆಲ್ಲ ನಿನ್ನ ನೈವೇದ್ಯ. ನಾನಾ ವ್ಯಂಜನ, ಲವಣ, ತೊಪ್ಪಲು, ಪಲ್ಯೆ, ಕಾಯಿಪಲ್ಯೆ, ಎಲ್ಲವೂ ನಿನಗರ್ಪಿತ.

ಸೂಪಮಸ್ತು ಸುಪಾಯಸಂ ಪರದೇವ ನೈಕವಿಧಂ ಸದಾ
ಚಿತ್ರಭಕ್ಷಮನೇಕಧಾಸ್ತು ವಿಚಿತ್ರಮಾಷವಿನಿರ್ಮಿತಮ್
ತೈಲಪಕ್ವಮಥಾಸ್ತು ತೇ ಘೃತಪಕ್ವಮಸ್ತು ಹರೇ ಜಲಾಂ
ಗಾರಪಕ್ವಸುಕಾಲಪಕ್ವಮಥಾಸ್ತು ಪಕ್ವಸುಪಂಚಕಮ್ ॥30॥

ನಾನುಣ್ಣುವ ಸೂಪ, ಉತ್ತಮ ಪಾಯಸ, ಬಗೆಬಗೆಯ ಚಿತ್ರಭಕ್ಷ್ಯಗಳು, ಉದ್ದಿನವಡೆ ಮುಂತಾದವೆಲ್ಲ ನಿನಗೆ ಸಮರ್ಪಿತ. ಎಣ್ಣೆಯಲ್ಲಿ, ತುಪ್ಪದಲ್ಲಿ ಕರೆದ ಹಾಗೂ ನೀರಿನಲ್ಲಿ, ಕೆಂಡದ ಮೇಲೆ ಬೇಯಿಸಿದ ಹಾಗೂ ಕಾಲದಿಂದಲೇ ಹಣ್ಣಾದ ಪದಾರ್ಥಗಳೆಲ್ಲ ನಿನ್ನ ನಿವೇದನೆ.

ಚಿತ್ರಮನ್ನಮಥಾಸ್ತು ತೇದ್ಯ ವಿಚಿತ್ರವಸ್ತುವಿನಿರ್ಮಿತಂ
ಚೋದನಂ ಪರಮಾನ್ನಮಸ್ತು ಸದೈವ ತೇ ಜಗತೀಪತೇ

ಶರ್ಕರಾಗುಡಮಿಶ್ರಿತಾನ್ನಮಥಾಸ್ತು ತೇ ಸತತಂ ಹರಿ-
ದ್ರಾನ್ನಮಸ್ತು ತಥೈವ ಭೋ ಪ್ರಿಯ ಮೌದ್ಗಮನ್ನಮಥಾಸ್ತು ತೇ ॥31॥

ವಿಚಿತ್ರವಸ್ತುಗಳಿಂದ ನಿರ್ಮಿಸಿದ ಚಿತ್ರಾನ್ನ, ಉತ್ತಮವಾದ ಅನ್ನ, ಪಾಯಸ, ಸಕ್ಕರೆ ಹಾಕಿದ ಅನ್ನ, ಬೆಲ್ಲ ಸೇರಿಸಿದ ಅನ್ನ, ಹಳದಿ ಅನ್ನ, ಹುಗ್ಗಿ (ಪೊಂಗಲು) ಮುಂತಾದವೆಲ್ಲ ನಿನಗೆ ಸಮರ್ಪಣೆ.

ಶಸ್ತವಸ್ತುವಿಮಿಶ್ರಿತಂ ಪುನರಾಮ್ಲವಸ್ತು ಸದಾಸ್ತು ತೇಽ
ನಾಮ್ಲವಸ್ತು ತಥಾಸ್ತು ತೇ ಪರದಿವ್ಯವಸ್ತು ಸಮನ್ವಿತಮ್
ನೂತನಂ ನವನೀತಮಸ್ತು ರಮೇಶ ನೂತನಮೇವ ತೇ
ಪಾತ್ರಪೂರ್ಣಘೃತಂ ಚ ತೇಽಸ್ತ್ವಥ ತಕ್ರಮಸ್ತು ದಧೀಶ ತೇ ॥32॥

ಭಾರೀ ಉತ್ತಮ ದ್ರವ್ಯಗಳಿಂದ ಬೆರೆಸಿದ ನೈವೇದ್ಯ ನಿನಗಿರಲಿ. ಹುಳಿ ರುಚಿಯ ಪದಾರ್ಥಗಳು, ಹುಳಿ ಅಲ್ಲದ ಪದಾರ್ಥಗಳು, ಪರಮದಿವ್ಯರಸವಸ್ತುಗಳು, ಇದೀಗ ಕಡೆದು ತೆಗೆದ ಬೆಣ್ಣೆ, ಪಾತ್ರೆಯಲ್ಲಿ ತುಂಬಿಟ್ಟ ತುಪ್ಪ, ಮಜ್ಜಿಗೆ, ಮೊಸರು ಎಲ್ಲವೂ ನಿನಗಿರಲಿ.

ಕ್ಷೀರಮಸ್ತು ರಮಾಪತೇ ಮಧು ಶರ್ಕರಾಪಿ ಸದಾಽಸ್ತು ತೇ
ಲೇಹ್ಯಪೇಯ ಸುಚೋಷ್ಯಖಾದ್ಯಮುಖಂ ಪರೇಶ ತವೈವ ಭೋ
ಪೂರ್ವಮುತ್ತರಮುಂಭಸೋಽಶನಮಸ್ತು ತೇಽಥ ಪರತ್ರ ಭೋ
ಕ್ಷಾಲನಂ ಕರಯೋರ್ಮುಖಸ್ಯ ಚ ಪಾದಯೋರಥನೇತ್ರಯೋಃ ॥33॥

ಹಾಲು, ಜೇನು, ಸಕ್ಕರೆ, ನೆಕ್ಕುವ ವಸ್ತು, ಕುಡಿಯುವ ವಸ್ತು, ಹೀರುವ ವಸ್ತು, ತಿನ್ನುವ ವಸ್ತು ಮುಂತಾದವುಗಳನ್ನೆಲ್ಲ ನಿನಗರ್ಪಿಸುವೆ. ಊಟದ ಮುಂಚಿನ ಆಪೋಶನ, ಉತ್ತರಾಪೋಶನ, ಊಟವಾದ ಬಳಿಕದ ಕರ, ಮುಖ, ಪಾದ, ನೇತ್ರಗಳ ಕ್ಷಾಲನವೆಲ್ಲವೂ ನಿನಗೆ ಸಮರ್ಪಿತ.

ಅಂಗುಲೀಜಲಮಸ್ತು ಸಂಚಲನಾದಿಕಂ ಸಫಲಂ ಚ ತಾಂ
ಬೂಲಮಸ್ತು ಸುದಿವ್ಯವಸ್ತುವಿಮಿಶ್ರಿತಂ ವಸುಧಾಪತೇ
ನೂತನಾಂಬರಮಸ್ತು ತೇ ಪರಿಧಾನಮಸ್ತು ತಥೈವ ಚೋ
ಷ್ಣೀಷಕಂಚುಕಪಾಟವಸ್ತ್ರಸುಮಧ್ಯಬಂಧನಮಸ್ತು ತೇ ॥34॥

ಬೆರಳುಗಳಿಗೆ ನೀರು, ಬೆರಳುಗಳ ಚಾಲನ, ಅನೇಕ ಶ್ರೇಷ್ಠ ದ್ರವ್ಯಗಳಿಂದ ಕೂಡಿದ ತಾಂಬೂಲ, ಹೊಸದಾದ ಉಡುವ ಬಟ್ಟೆ, ಹೊದೆಯುವ ಬಟ್ಟೆ, ತಲೆಗೆ ಸುತ್ತುವ ಮುಂಡಾಸು, ಮೈಗೆ ಹಾಕುವ ಅಂಗಿ, ಕಾಲುವಸ್ತ್ರ ಸೊಂಟಪಟ್ಟಿ ಎಲ್ಲವೂ ನಿನಗೊಪ್ಪಿಸುವೆ.

ಆವಿಕಂ ಚ ತಥೋರ್ಣಪೂರ್ವವಿಚಿತ್ರವಸ್ತ್ರಮುಪೇಶ ತೇ
ದರ್ಪಣಂ ತವ ಚಾಮರೇ ಗಣಿಕಾದಿಗೀತಸುನರ್ತನಮ್
ಛತ್ರವಾದ್ಯವಿಚಿತ್ರಶಬ್ದಸುಲಾಲನಂ ಸ್ವರಭೇದತೋ
ಪಾದರಕ್ಷಕಪೂರ್ವಮಸ್ತು ಸದೈವ ತೇ ಧರಣೀಪತೇ ||35||

ಕಂಬಳಿ, ಶಾಲು ಮುಂತಾದ ಉಣ್ಣೆಯ ಬಟ್ಟೆಗಳು, ಕನ್ನಡಿ, ಚಾಮರ, ಗೀತ, ನೃತ್ಯ, ಛತ್ರ, ವಾದ್ಯಗಳ ವಿಚಿತ್ರ ಶಬ್ದಗಳು, ನಾನಾ ಸ್ವರಗಳು, ಪಾದರಕ್ಷೆ ಮುಂತಾದವನ್ನೆಲ್ಲ ನಿನ್ನದೇ ನಿನಗೆ ಸಮರ್ಪಿಸುವೆ.

ವಾಜಿಪೂರುಷಯಾನಗೋಯುತಯಾನಮುಪ್ಯಥ ತೇ ತಥೋ-
ದ್ಯಾನವೀಕ್ಷಣಚಾರಣಾದಿಕಮಸ್ತು ತೇ ಕಮಲಾಪತೇ
ಕ್ಷೇತ್ರವೀಕ್ಷಣದೇವತಾಲಯಭಿತ್ತಿಚಿತ್ರನಿರೀಕ್ಷಣಂ
ಪಕ್ಷಿಯುದ್ಧನಿರೀಕ್ಷಣಾದಿ ತವಾಸ್ತು ನಿತ್ಯವಿಚಕ್ಷಣ ||36||

ಅಶ್ವವಾಹನ, ನರವಾಹನ, ಎತ್ತಿನಬಂಡಿ ಇವುಗಳಲ್ಲಿ ಸಂಚಾರ, ಉದ್ಯಾನಗಳ ವೀಕ್ಷಣ, ಸಂಚಾರ, ಕ್ಷೇತ್ರ, ದೇವಾಲಯ ಹಾಗೂ ಗೋಡೆಯ ಮೇಲೆ ಬರೆದ ಚಿತ್ರಗಳ ನೋಟ, ಪಕ್ಷಿಯುದ್ಧ ನಿರೀಕ್ಷಣ ಮುಂತಾದವಲ್ಲೆ ನಿನಗೇ ಸಮರ್ಪಣ.

ತತ್ರ, ತತ್ರ, ಫಲಾದಿಭಕ್ಷಣಲಕ್ಷಣೇತರವೀಕ್ಷಣಂ
ಶಿಕ್ಷಣಂ ನಿಜಭೃತ್ಯಕೇ ಗೃಹಸಂಗಮಶ್ಚ ಪುನಸ್ತವ
ಕ್ಷಾಲನಂ ಪದಯೋಸ್ತವಾಸ್ತ್ವಜ ಪಾಣಿಪೂಜಿತಪಾದಗಂ-
ಡೂಷಣಂ ಚ ತವಾಸ್ತು ಚಾಸನಮಸ್ತು ತೇ ಭುಜಗಾಸನ ||37||

ಬೇರೆ ಬೇರೆ ಫಲಭಕ್ಷಣ, ಸುಲಕ್ಷಣವಲ್ಲದ್ದನ್ನು ವೀಕ್ಷಿಸುವದು, ತನ್ನ ದಾಸರನ್ನು ಶಿಕ್ಷಿಸುವದು, ಪುನಃ ಮನೆಗೆ ಆಗಮನ, ಪಾದಪ್ರಕ್ಷಾಲನ, ಗಂಡೂಷ, ಆಸನ ಇವೆಲ್ಲವೂ ನಿನಗೆ ಸಮರ್ಪಿತ.

ಪಾತ್ರಯುಗಮಥಾಸ್ತು ಸೂದಕಪೂರ್ಣಮಸ್ತು ತನ್ವೈವ ಕೌ-
ಶೇಯಯುಗ್ಮಮಥಾಖಿಲಂ ಪರಮಾನ್ಹಿಕಂ ಚ ತಥೋತ್ತರಮ್
ಕಂದಮೂಲಸುಕಾಲಪಕ್ವಫಲಂ ಚ ಸರ್ವಮಥಾಸ್ತು ತೇ
ಕ್ಷೀರನೀರಗುಡೇಕ್ಷುಸರ್ಪಿರಥಾಸ್ತು ತೇ ವ್ಯಜನಂ ಚ ಭೋ ||38||

ನೀರು ತುಂಬಿದ ಎರಡು ಪಾತ್ರೆಗಳು ಹಾಗೂ ರೇಶ್ಮೆಯ ಎರಡು ಬಟ್ಟೆಗಳು, ಸಂಜೆಯ ಉತ್ತರಾನ್ಹಿಕ, ಕಂದಮೂಲ ಫಲ, ಹಾಲು, ನೀರು, ಬೆಲ್ಲ, ಕಬ್ಬು, ತುಪ್ಪ ಮತ್ತು ಬೀಸಣಿಕೆ ಮುಂತಾದವನ್ನು ನಿನಗರ್ಪಿಸುವೆ.

ಯಾಮಜಾಗರಣಂ ತವಾಸ್ತ್ವನುಗೀತನರ್ತನಪೂರ್ವಕಂ
ಮಂತ್ರಪಾಠನಸನ್ನಮಸ್ಕೃತಿಪೂರ್ವಕಂ ಚ ತವ ಪ್ರಿಯ
ದೀಪಯುಗ್ಮಥಾಸ್ತು ತೇ ಪರಧೂಪಮಸ್ತು ಸುಗಂಧಯುಕ್
ಚಾಪ ಉತ್ತಮಕಾ ಭವಂತು ನು ತಾಪಹಾ ಮರುದಸ್ತು ತೇ ||39||

ಒಂದು ಯಾಮದವರೆಗೆ ಜಾಗರಣ, ಗೀತ, ನರ್ತನ, ಮಂತ್ರಪಾಠ, ನಮಸ್ಕಾರ, ಜೊತೆ ದೀಪಗಳು, ಉತ್ತಮ ಧೂಪ, ಮಿಗಿಲಾದ ಸುಗಂಧ, ಘಮ ಘಮ ಪರಿಮಳದ ನೀರು, ತಂಪನೆಯ ಗಾಳಿ ಎಲ್ಲವೂ ನಿನಗರ್ಪಿತ.

ಶ್ರೀಪತೇ ಕಶಿಪುಸ್ತವಾಸ್ತ್ವನು ದೇವ ತೇ ಹ್ಯುಪಬರ್ಹಣಂ
ಮಂಚಪೂರ್ವಕಭೋಗಸಾಧನಮಸ್ತು ಸರ್ವಮಪೀಶ ತೇ
ಕಂಕಣಾದಿವಿಭೂಷಣಂ ನವವಸ್ತ್ರಮಸ್ತು ಚ ಕಿಂ ಪುನ-
ರ್ಜಾಗರಸ್ಥಸಮಸ್ತವಸ್ತು ತವಾಸ್ತು ನಿಸ್ತುಲವಸ್ತು ಭೋ ||40||

ಓ ದೇವ! ಮಂಚ, ಹಾಸಿಗೆ, ತಲೆದಿಂಬು ಮುಂತಾದ ಸಕಲ ಭೋಗಸಾಧನಗಳೆಲ್ಲ ನಿನ್ನದಾಗಲಿ, ಕಂಕಣಾದಿಭೂಷಣಗಳು, ಹೊಸ ಬಟ್ಟೆ ಮುಂತಾದವೂ ನಿನಗೇ ಸಮರ್ಪಿತ. ಇಷ್ಟು ಮಾತ್ರವಲ್ಲ, ಜಾಗರದ ಎಲ್ಲ ವಸ್ತುಗಳೂ ನಿನಗೇ ಅರ್ಪಿತ.

ಯದ್ವದೇವ ಹಿ ಜಾಗರಸ್ಥಸಮಸ್ತವಸ್ತು ತವ ಪ್ರಭೋ
ತದ್ವದೇವ ಚ ವಾಸನಾತ್ಮಕವಸ್ತು ಸರ್ವಮಥಾಸ್ತು ತೇ
ಸುಪ್ತಿಗಂ ಸುಖಮಸ್ತು ತೇ ಪುನರಸ್ತು ಮಾನಸವಾಸನಾ-
ಜಾತವಸ್ತು ಸಮಸ್ತಮಪ್ಯಥ ಜಾಗರಾಂತಮನಂತ ಭೋ ||41||

ಜಾಗರದ ವಸ್ತುಗಳಂತೆ ಸ್ವಪ್ನದ ವಾಸನಾಮಯಪದಾರ್ಥಗಳೂ ನಿನಗೆ ಸಮರ್ಪಣೆ. ನಾನು ಸುಷುಪ್ತಿಯಲ್ಲಿ ಅನುಭವಿಸುವ (ಸ್ವರೂಪ) ಸುಖವೂ ನಿನಗಿರಲಿ. ಈ ಎಲ್ಲ ಅವಸ್ಥೆಗಳಿಗೂ ನೀನೇ ಒಡೆಯ.

ವ್ಯಾಧಯೋಽಪ್ಯಥವಾಧಯಸ್ತನುಭೇದದಾಹನಪೂರ್ವಕಂ
ಚಾತ್ರಜನ್ಮನಿ ಪೂರ್ವಜನ್ಮಸು ಚೋತ್ತರೇಷು ತಥೈವ ಭೋ
ಕಿಂ ಪುನರ್ಬಹುಭಾಷಿತೇನ ಶರೀರಜಂ ತ್ವಥ ಮಾನಸಂ
ವಾಗ್ಭವಂತ್ವಸ್ತು ತವೇಶ ಸಂತತಮೇಷ ಸರ್ವವಿಧಿರ್ಮಮ **II42II**

ಹೆಚ್ಚೇನು, ದೇಹದ ರೋಗಗಳು, ಮನದ ವ್ಯಥೆಗಳು, ಮಾತ್ರವಲ್ಲ, ಮರಣವಾದ ಬಳಿಕದ ದೇಹದ ದಹನವೂ ನಿನಗೇ ಸಮರ್ಪಿತ. ಈ ಜನ್ಮದ ಇದೆಲ್ಲ ಸಮರ್ಪಿತ. ಮಾತ್ರವಲ್ಲ, ಹಿಂದಣ ಅನಂತ ಜನ್ಮದ, ಮುಂದಣ ಅನೇಕ ಜನ್ಮಗಳ ಈ ಎಲ್ಲವೂ ನಿನಗೇ ಅರ್ಪಿತ. ಹೆಚ್ಚೇನು, ಶರೀರ, ಮಾತು, ಮನಸ್ಸುಗಳಿಂದ ಆದುದೆಲ್ಲ ಹಾಗೂ ಆಗುವದೆಲ್ಲ ನಿನ್ನದೇ; ನಿನಗೇ ಸಮರ್ಪಿತ.

ಬಿಂಬಪೂಜನಮೇವಮೇವ ಹಿ ಕುರ್ವತೋ ನ ಚ ಪಾತಕಂ
ದುಷ್ಟಕರ್ಮಜಮಪ್ಯಕರ್ಮಜಮಂತಿಕಂ ಪ್ರತಿ ಗಚ್ಛತಿ
ಏತದತ್ರ ಸುದುರ್ಲಭಂ ಭುವಿ ಭಾರತೇ ನರಜನ್ಮನಾಂ
ಕ್ವಾಪಿ ನೈವ ಸ ಪಾತಕಾತ್ಮನ ಅಂತಿಕಂ ಪ್ರತಿ ಗಚ್ಛತಿ **II43II**

ಈ ತೆರನಾಗಿ ಸಮಗ್ರ ಜೀವನವನ್ನೇ ದೇವರಿಗೆ ಸಮರ್ಪಿಸಬೇಕು. ಇದುವೇ ಬಿಂಬಪೂಜಾಕ್ರಮ. ತನ್ನದೆಂದು ಯಾವುದನ್ನೂ ಉಳಿಸಿಕೊಳ್ಳಬಾರದು. ಆತ್ಮಾತ್ಮೀಯವನ್ನೆಲ್ಲ ಸಮರ್ಪಿಸುವದು ಮಿಗಿಲಾದ ಪೂಜೆ. ಆತ್ಮಸಮರ್ಪಣೆಯಲ್ಲಿ ಲೋಭ ಬಿಂಬರೂಪ ಭಗವಂತನ ದ್ರೋಹವೆಂದು ಪರಿಗಣಿತವಾಗಿದೆ. ಅದು ನಿತ್ಯ ನಿರಯಸಾಧನ.

ಹೀಗೆ ಬಿಂಬಪೂಜೆಯನ್ನು ಮಾಡುವವನಿಗೆ ಯಾವ ಪಾಪಗಳಿಂದಲೂ ನರಕಾದಿಗಳು ಆಗುವುದಿಲ್ಲ. ನಿಷಿದ್ಧಕರ್ಮ ಕರಣದಿಂದಾಗಲೀ, ವಿಹಿತಕರ್ಮ ಅಕರಣಗಳಿಂದಾಗಲಿ ನರಕಾದಿಗಳು ಆಗುವುದಿಲ್ಲ. ಈ ಬಿಂಬಪೂಜಾರೂಪವಾದ ಮಹತ್ತರಸಾಧನವು ಭಾರತ ಭೂಮಿಯಲ್ಲಿಯ ಮಾನವರಿಗೂ ದುರ್ಲಭ. ಪಾಪಿಗಳಾದ ಯಾವ ಮಾನವರಿಗೂ ಈ ಬಿಂಬಪೂಜನರೂಪವಾದ ಸಾಧನೆಯು ದೊರೆಯುವುದಿಲ್ಲ. ಮೋಕ್ಷಯೋಗ್ಯರಾದವರಿಗೂ

ಪ್ರಾರಬ್ಧಕರ್ಮಾದಿವಶಾತ್ ಈ ಬಿಂಬಪೂಜಾ ಸಾಧನಕ್ರಮವು ಅನೇಕರಿಗೆ ಕೇಳಸಿಗುವುದಿಲ್ಲ. ಕೇಳಸಿಕ್ಕರೂ ನಂಬುಗೆ ಮೂಡುವುದಿಲ್ಲ. ನಂಬಿಗೆ ಮೂಡಿದರೂ ಮಾಡಲಾಗುವುದಿಲ್ಲ.

ಬಿಂಬಪೂಜನಮಂತರಾ ನ ಚ ಮುಕ್ತಿರಸ್ತಿ ಹಿ ಕಸ್ಯಚಿತ್
ಸರ್ವಮನ್ಯದನುಷ್ಠಿತಂ ನನು ಚಿತ್ತಶೋಧನ ಪೂರ್ವಕಂ
ಸಾಧನಂ ಭವತೀಹ ಪೂಜನ ಏವ ಸಂತತಮಾದರಾ-
ನ್ಮೋದತೀರ್ಥನಿಬಂಧ ಏವ ಹಿ ಮಾನಮತ್ರ ಮಯೋದಿತೇ ||44||

ಬಿಂಬಪೂಜೆಯನ್ನು ಮಾಡದ ಹೊರತು ಯಾರಿಗೂ ಮುಕ್ತಿಯಾಗಲು ಸಾಧ್ಯವಿಲ್ಲ. ಉಳಿದೆಲ್ಲ ಸಾಧನೆಗಳು ಚಿತ್ತಶೋಧನಕ್ಕೆ ಮಾತ್ರ ಕಾರಣ. ಆದುದರಿಂದ ಉಳಿದ ಸಕಲ ಸಾಧನೆಗಳಿಂದ ಶುದ್ಧಚಿತ್ತನಾಗಿ ಬಿಂಬಪೂಜೆಯನ್ನು ಸಂತತವಾಗಿಯೂ ಆದರದಿಂದಲೂ ಮಾಡುವದು ತೀರ ಅಗತ್ಯ. ಈ ತತ್ತ್ವವು ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯರ ದಿವ್ಯಮಂಗಲಗ್ರಂಥಗಳಲ್ಲಿ ನಿರೂಪಿತವಾಗಿದೆ ಎಂದು ಅಭಿಪ್ರಾಯ.

ಉಪಸಂಹಾರ :

ಅವಧೂತಶಿರೋರತ್ನಜಯತೀರ್ಥವಿನೋದತಃ
ಪ್ರಸನ್ನಃ ಶ್ರೀಹರಿರ್ದದ್ಯಾತ್ ಸತಾಂ ಸರ್ವಮಪೇಕ್ಷಿತಂ ||45||

ಅವಧೂತ ಶಿರೋಮಣಿಗಳಾದ ಶ್ರೀ ಜಯತೀರ್ಥ (ವಿಷ್ಣುತೀರ್ಥ)ರ ಈ ಸೇವೆಯಿಂದ ಪ್ರಸನ್ನನಾದ ಶ್ರೀಹರಿಯು ಸಜ್ಜನರ ಅಭೀಷ್ಟವನ್ನೆಲ್ಲ ಪೂರೈಸಲಿ.

ಭವರೋಗೌಷಧಂ ದಿವ್ಯಂ ಭಜಮಾನಾಃ ಪುನಃ ಪುನಃ
ಬಿಂಬಪೂಜನಸಂಜ್ಞಂ ತೇ (ನಾಮಾನಂ) ನ ಭಜಂತಿ ಪುನರ್ಭವಂ ||46||

ಸಂಸಾರವೆಂಬ ರೋಗದ ಬಿಂಬಪೂಜನರೂಪವಾದ ಈ ದಿವ್ಯ ಔಷಧವನ್ನು ಬಾರಿ ಬಾರಿ ಸೇವನೆ ಮಾಡುವವರಿಗೆ ಸಂಸಾರವು ಸೋಂಕುವುದಿಲ್ಲ.

ನಂದಿ(ದ) ತೀರ್ಥಪ್ರಬಂಧಾಖ್ಯಸುಧಾಸಿಂಧುವಿಹಾರಿಣಃ
ಬಾಂಧವಾ ಮತ್ಕೃತೌ ತೋಷಂ ಯಾಂತ್ವೇಪಾಂತರಚಿಂತಕಾಃ ||47||

ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ಗ್ರಂಥಗಳೆಂಬ ಸುಧಾ ಸಿಂಧುವಿನಲ್ಲಿ ವಿಹರಿಸುವ, ಅಂತರಾತ್ಮ ಚಿಂತನಶೀಲ, ಎನ್ನಯ ಬಾಂಧವರು ನನ್ನೀ ಕೃತಿಯಲ್ಲಿ ಸಂತೋಷಪಡುವದು ಖಂಡಿತ.

ಸುಪುಣ್ಯೇ ಭಾರತೇ ರಮ್ಯೇ ಯೇ ವಿಜ್ಞಾನವಿವರ್ಜಿತಾಃ
ದುಃಶಾಸ್ತ್ರದೂಷಿತಾತ್ಮಾನಃ ಕಿಂ ಮಾಂ ನಿಂದಂತಿ ದುರ್ಬಲಾಃ ॥48॥

ರಮ್ಯ ಪುಣ್ಯ ಈ ಭಾರತಭೂಮಿಯಲ್ಲಿ ಜನಿಸಿಯೂ ತಾವು ಸ್ವಯಂ ಜ್ಞಾನರಹಿತರೂ, ದುಃಶಾಸ್ತ್ರಗಳ ಪ್ರಭಾವದಿಂದ ತಿಳಿಗೇಡಿಗಳೂ, ಜ್ಞಾನದುರ್ಬಲರೂ ಆಗಿರುವರು. ಅಂಥ ಜನ ನನ್ನನ್ನು ನಿಂದಿಸುವದರಿಂದೇನು?

ದೋಷೇತಾಪಿ ಮದೀಯಾ ವಾಗ್ಗ್ರಾಹ್ಯೈವ ಧರಣೀಸುರೈಃ
ಶ್ಲಾಘ್ಯತೇ ಗುಣಲುಬ್ಧೈರ್ಹಿ ಕಂಟಕೇತಾಪಿ ಕೇತಕೀ ॥49॥

ಮುಳ್ಳಿದ್ದರೂ ಕೇತಕೀ ಹೂವು ಗ್ರಾಹ್ಯವಲ್ಲವೇ? ಅಂತೆಯೇ ದೋಷವಿದ್ದರೂ ನನ್ನೀ ವಚನಗಳನ್ನು ಗುಣಪ್ರೇಮಿ ಬ್ರಾಹ್ಮಣರು ಶ್ಲಾಘಿಸುವರು.

ಇತಿಶ್ರೀಮದವಧೂತ ಶಿರೋಮಣಿ
ಶ್ರೀವಿಷ್ಣುತೀರ್ಥ ವಿರಚಿತಾ ಅಧ್ಯಾತ್ಮರಸರಂಜನೀ

ನಮ್ಮ ಪ್ರಕಟಣೆಗಳು

1. **ಶ್ರೀ ವಿಷ್ಣುತೀರ್ಥರ ಅಧ್ಯಾತ್ಮ ರಸರಂಜನೀ ಕನ್ನಡ ಅನುವಾದದೊಂದಿಗೆ**
   ಮೂರು ಆವೃತ್ತಿಗಳಲ್ಲಿ
   ಅನುವಾದಕರು : ಬ್ರಹ್ಮಾತ್ಮದಾಸ ಪಂ. ವಿದ್ಯಾಸಿಂಹಾಚಾರ್ಯ ಮಾಹುಲಿ

2. **ಶ್ರೀ ವಿಷ್ಣುತೀರ್ಥರ ಭಾಗವತ ಸಾರೋದ್ಧಾರ** ಕನ್ನಡ ಅನುವಾದದೊಂದಿಗೆ
   ಅನುವಾದಕರು : ಶ್ರೀ ಶಾಮರಾವ್ ಬಂಡೇರಾವ್ ಗಜೇಂದ್ರಗಡ

3. **ಶ್ರೀಮದ್ ಭಾಗವತಸಾರೋದ್ಧಾರಃ**
   ಸಂಸ್ಕೃತ ಟಿಪ್ಪಣೀ ಹಾಗೂ ಭಾಗವತ ತಾತ್ಪರ್ಯದೊಂದಿಗೆ
   ಸಂಪಾದಕರು : ಪಂ. ಶ್ರೀಕರಾಚಾರ್ಯ ಅಡವಿ

4. **ಶ್ರೀ ವಿಷ್ಣುತೀರ್ಥರ ಸಾರೋದ್ಧಾರ ಗ್ರಂಥಗಳು**
   ಕನ್ನಡ ಪದ್ಯರೂಪದಲ್ಲಿ
   ಅನುವಾದಕರು : ಡಾ. ಎಚ್. ಜಿ. ಲೋಕೂರ

5. **ಅವಧೂತ ಶಿರೋಮಣಿ ಶ್ರೀ ವಿಷ್ಣುತೀರ್ಥರು**
   ಜೀವನ ಚರಿತ್ರೆ ಹಾಗೂ ಕೃತಿಗಳು
   ಲೇಖಕರು : ಪಂ. ಶ್ರೀಕರಾಚಾರ್ಯ ಅಡವಿ

6. **ಮನ್ನ್ಯಾಯ ಸುಧಾ ಸ್ತುತಿಃ**
   ಕೃಷ್ಣಾಚಾರ್ಯರ ವ್ಯಾಖ್ಯಾನ ಹಾಗೂ ಕನ್ನಡ ಅನುವಾದದೊಂದಿಗೆ
   ಅನುವಾದಕರು : ಪಂ. ಶ್ರೀಕರಾಚಾರ್ಯ ಅಡವಿ

ಶ್ರೀ ವ್ಯಾಸತತ್ತ್ವಜ್ಞ ಪ್ರತಿಷ್ಠಾನ ಮಾದನೂರ, ಜಿಲ್ಲಾ : ಕೊಪ್ಪಳ